# ನಗರಸಭಾ ಕಾರ್ಯಾಲಯ, ರಾಮನಗರ

ಸಂ: ಸಾಮಾನ್ಯ ಸಭೆ/06/2006-07 ದಿ: 13-12-2006

ದಿ: 13-12-2006 ರ ಬುಧುವಾರ ಬೆಳ್ಳಿಗ್ಗೆ 11.00 ಘಂಟೆಗೆ ಸರಿಯಾಗಿ ನಗರಸಭೆಯ ಪ್ರಶಸ್ತಿ ಭವನದಲ್ಲಿ ಶ್ರೀ. ಸೈಯದ್ ಖಿಜರ್ ಪಾಷ ಅಧ್ಯಕ್ಷರು ನಗರಸಭೆ ರಾಮನಗರ ರವರ ಅಧ್ಯಕ್ಷತೆಯಲ್ಲಿ ನಡೆದ ನಗರಸಭೆಯ ಸಾಮಾನ್ಯ ಸಭೆಯ ನಡವಳಿಗಳು.

| ಹಾಜರಿ-20 | ಗೈರುಹಾಜರಿ-10 | ಖಾಲಿ-1 | ಒಟ್ಟು-31 |
|---|---|---|---|
| XXX | XXX | XXX | XXX |

ಸಭೆ ಪ್ರಾರಂಭಕ್ಕೆ ಪೌರಾಯುಕ್ತರು ಸಭೆಗೆ ಆಗಮಿಸಿದ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಹಾಗೂ ಪತ್ರಕರ್ತರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸುವಂತೆ ಅಧ್ಯಕ್ಷರನ್ನು ಕೋರಿ, ಸಭೆಯನ್ನು ಯಶಸ್ವಿಯಾಗಿ ನಡೆಸಿಕೊಂಡುವಂತೆ ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು ಕೋರಿದರು.

ವಿಷಯ 75 :- ದಿ: 10-08-06 ರ ಸಾಮಾನ್ಯ ಸಭೆ ಹಾಗು ದಿನಾಂಕ: 06-10-06 ರ ಹಾಗು 20-11-06 ರ ವಿಶೇಷ ಸಭೆಯ ನಡವಳಿಯನ್ನು ಓದಿ ರೆಕಾರ್ಡ್ ಮಾಡುವ ವಿಚಾರ.

ತೀರ್ಮಾನ 75:- ದಿ: 10-08-06 ರ ಸಾಮಾನ್ಯ ಸಭೆ ಹಾಗು ದಿನಾಂಕ: 06-10-06 ರ ಹಾಗು 20-11-06 ರ ವಿಶೇಷ ಸಭೆಯ ನಡವಳಿಯನ್ನು ಓದಿ ರೆಕಾರ್ಡ್ ಮಾಡಲಾಯಿತು.

ವಿಷಯ 76 :- ಜುಲೈ 2006 ರಿಂದ ನವಂಬರ್ 2006 ರ ಮಾಹೆಯ ಜನನ ಮರಣ ತ:ಖ್ತೆಯನ್ನು ಓದಿ ರೆಕಾರ್ಡ್ ಮಾಡುವ ವಿಚಾರ.

| ಮಾಹೆ ಮತ್ತು ವರ್ಷ | ಜನನ | | ಒಟ್ಟು | ಮರಣ | | ಒಟ್ಟು |
|---|---|---|---|---|---|---|
| | ಗಂಡು | ಹೆಣ್ಣು | | ಗಂಡು | ಹೆಣ್ಣು | |
| ಜುಲೈ-2006 | 109 | 114 | 223 | 45 | 14 | 59 |
| ಆಗಸ್ಟ್-2006 | 140 | 244 | 384 | 44 | 16 | 60 |
| ಸೆಪ್ಟಂಬರ್-2006 | 86 | 85 | 171 | 48 | 8 | 56 |
| ಅಕ್ಟೋಬರ್-2006 | 143 | 156 | 299 | 31 | 16 | 47 |
| ನವಂಬರ್-2006 | 146 | 154 | 300 | 70 | 18 | 88 |

ತೀರ್ಮಾನ 76:- ಓದಿ ರೆಕಾರ್ಡ್ ಮಾಡಲಾಯಿತು.

ವಿಷಯ 77 :- ಜುಲೈ 2006 ರಿಂದ ನವಂಬರ್ 2006 ರ ಮಾಹೆಯ ಜಮಾ ಖರ್ಚಿನ ತ:ಖ್ತೆಯನ್ನು ಓದಿ ಒಪ್ಪಿ ಅಂಗೀಕರಿಸುವ ವಿಚಾರ.

ತೀರ್ಮಾನ 77:- ಜುಲೈ 2006 ರಿಂದ ನವಂಬರ್ 2006 ರ ವರೆಗಿನ ಜಮಾ ಖರ್ಚನ್ನು ಸಭೆಯು ಕೂಲಂಕುಷವಾಗಿ ಪರಿಶೀಲಿಸಿ ಓದಿ ಒಪ್ಪಿ ಸರ್ವಾನುಮತದಿಂದ ಅಂಗೀಕರಿಸಿತು.

PDF Created with deskPDF PDF Writer - Trial :: http://www.docudesk.com

ವಿಷಯ 78 :-ಸರ್ಕಾರದ ಸುತ್ತೋಲೆ ಮತ್ತು ಪ್ರಪತ್ರಗಳನ್ನು ಓದಿ ರೆಕಾರ್ಡ್ ಮಾಡುವ ವಿಚಾರ.

78/1:-ಸರ್ಕಾರದಿಂದ, ಮಹಾನಗರ ಪಾಲಿಕೆ/ಪುರಸಭೆ/ನಗರಸಭೆ/ಪಟ್ಟಣ ಪಂಚಾಯಿತಿಗಳು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ-1961 ರ ಪ್ರಕರಣ 18 ರಡಿ ವಸೂಲು ಮಾಡಿರುವ ಶುಲ್ಕದ ಶೇ.5 ರ ಭಾಗವನ್ನು ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿಗೆ ವರ್ಗಾಯಿಸುವ ಬಗ್ಗೆ ಬಂದಿರುವ ಸುತ್ತೋಲೆ ಸಂಖ್ಯೆ:ನಅಇ/23/ಬೆಂರೂಪ್ರ/2006 ದಿ:29-7-2006 ನ್ನು ಸಭೆ ಗಮನಕ್ಕೆ ತರಲಾಯಿತು. ನಂತರ ಸಭೆಯು ಸುಧೀರ್ಘವಾಗಿ ಚರ್ಚಿಸಿ ಸುತ್ತೋಲೆಯಲ್ಲಿ ತಿಳಿಸಿರುವಂತೆ ದಿ: 20-1-2004 ರಿಂದ ವಸೂಲಾತಿಸಿರುವ ರಿಂದ 31-12-2005 ರವರೆಗೆ ಸಂಗ್ರಹಿಸಲಾದ ಮೊಬಲಗಿನಲ್ಲಿ ಶೇ 5 ಭಾಗದ ಮೊತ್ತವನ್ನು ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ನಗರಾ ಯೋಜನಾ ಮಂಡಳಿ ರವರಿಗೆ ವರ್ಗಾಹಿಸಲು ಸಭೆಯು ಒಪ್ಪಿ ಸರ್ವಾನುಮತದಿಂದ ತೀರ್ಮಾನಿಸಿತು.

ವಿಷಯ 79 :-ನಗರದ ಗಣ್ಯರ ಮತ್ತು ನಾಗರೀಕರ ಕೋರಿಕೆಯ ಮೇರೆಗೆ ಹಾಗೂ ಮಾನ್ಯ ಅಧ್ಯಕ್ಷರು ಸೂಚನೆಯಂತೆ ನೆಹರು ಪಾರ್ಕ್ ಹತ್ತಿರವಿರುವ ವೃತ್ತವನ್ನು ಡಾ: ಜಯರಾಮ್‌ರಾವ್ ವೃತ್ತ ಎಂದು ಹೆಸರಿಡಲು ಕೋರಿರುವ ಮನವಿ ವಿಚಾರ.

ತೀರ್ಮಾನ 79:- ವಿಷಯ 81 ಸಹ ಇದಕ್ಕೆ ಸಂಬಂಧಿಸಿದ್ದಾರಿಂದ ತೀರ್ಮಾನ 81 ರಲ್ಲಿ ವಿವರಿಸಿದೆ.

ವಿಷಯ 80:- ಮಾನ್ಯ ಮುಖ್ಯಮಂತ್ರಿಗಳವರ ವಿಶೇಷಾಧಿಕಾರಿಗಳ ಪತ್ರ ದಿ: 08-09-2006 ರಲ್ಲಿ ಕೆ.ಪದ್ಮನಾಭಸಿಂಗ್, ಅಧ್ಯಕ್ಷರು, ರಜಪೂತ ಮಹಾ ಸಭಾ ರಾಮನಗರ ರವರ ಕೋರಿಕೆಯಂತೆ ರಜಪೂತ್ ಮಹಾಸಂಘಕ್ಕೆ ನಿವೇಶನ ಮಂಜೂರು ಮಾಡಲು ಕೋರಿರುವುದನ್ನು ಪರಿಶೀಲಿಸುವ ವಿಚಾರ.

ತೀರ್ಮಾನ 80:-ಸಭೆಗೆ ನಿವೇಶನ ಕೋರಿ ಬಂದಿರುವ ಪತ್ರವನ್ನು ಓದಿ ವಿವರಿಸಲಾಯಿತು. ನಂತರ ಸಭೆಯು ಪರಿಶೀಲಿಸಿತು ನಗರಸಭೆ ಹೊಂದಿರುವ ನಿವೇಶನವನ್ನು ಪತ್ತೇಹಚ್ಚಿ ಪೂರ್ಣ ವಿವರಗಳೊಡನೆ ಸಭೆಗೆ ತರುವುದೆಂದು ತೀರ್ಮಾನಿಸಲಾಯಿತು.

ವಿಷಯ 81:-ಶ್ರೀ. ಎನ್. ಸುಂದ್ರೇಶ್, ಬೆಂಗಳೂರು, ಇವರು ಧರ್ಮರತ್ನಾಕರ ಮಹಾಧಾನಿ ದಿವಂಗತ ನಂಜಪ್ಪನವರ ಪುತ್ತಲಿ ಸ್ಥಾಪಿಸಲು ಸೂಕ್ತ ಸ್ಥಳ ಕಲ್ಪಿಸಿಕೊಡಲು ಕೋರಿರುವ ಬಗ್ಗೆ ಪರಿಶೀಲಿಸುವ ವಿಚಾರ.

ತೀರ್ಮಾನ 81:-ಸಭೆಯು ಧೀರ್ಘವಾಗಿ ಚರ್ಚಿಸಿತು. ಮೇಲ್ಕಂಡ ಪ್ರಸ್ತಾವಿತ ಇಬ್ಬರು ಮಹಾನೀಯರುಗಳು ಒಂದೇ ಕುಟುಂಬದವರಾಗಿರುತ್ತಾರೆ. ನೆಹರು ಪಾರ್ಕ್ ಬಳಿ ಇರುವ ವೃತ್ತಕ್ಕೆ ಹಿಂದಿನ ಸಭೆಯಲ್ಲಿ ಗಣ್ಯರ ಪುತ್ಥಳಿ ನಿರ್ಮಿಸಲು ತೀರ್ಮಾನವಾಗಿರುವುದರಿಂದ ಹಾಲಿ ಇರುವ ನಂಜಪ್ಪ ಬಡಾವಣೆಯ ರಸ್ತೆಗೆ ಡಾ|| ಜಯರಾಮ್‌ರವರ ಹೆಸರಿಡಲು ಅಧ್ಯಕ್ಷರು ತಿಳಿಸಿದರು. ನಂತರ ಸಭೆಯು ಅಧ್ಯಕ್ಷರ ಸೂಚನೆಯನ್ನು ಒಪ್ಪಿ ಅಂಗೀಕರಿಸಿತು ಹಿಂದಿನ ಸಭೆಯಲ್ಲಿ ನಗರಸಭೆಯ ಪ್ರಮುಖ ವೃತ್ತಗಳಲ್ಲಿ ದೇಶಕ್ಕಾಗಿ ದುಡಿದ ಗಣ್ಯರ ಪುತ್ಥಳಿಗಳನ್ನು ಸ್ಥಾಪಿಸಲು ತೀರ್ಮಾನವಾಗಿರುವುದರಿಂದ ಶ್ರೀ ನಂಜಪ್ಪನವರ ಪುತ್ಥಳಿ ಸ್ಥಾಪಿಸಲು ವೃತ್ತವನ್ನು ಗುರುತಿಸಿ ಮುಂದೆ ಸಭೆಗೆ ತರಲು ತೀರ್ಮಾನಿಸಲಾಯಿತು.

ವಿಷಯ 82:- ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ ವಾಹನಗಳ ರೀಪೇರಿಗಾಗಿ ಬಂದಿರುವ ಟೆಂಡರ್‌ಗಳನ್ನು ಪರಿಶೀಲಿಸಿ ಅನುಮೋದಿಸುವ ವಿಚಾರ.

PDF Created with deskPDF PDF Writer - Trial :: http://www.docudesk.com

ತೀರ್ಮಾನ 82:-ವಾಹನಗಳ ರಿಪೇರಿಗಾಗಿ ಕೆಳಕಂಡಂತೆ ಬಂದಿರುವ ಟೆಂಡರ್‌ಗಳನ್ನು ಸಭೆ ಗಮನಕ್ಕೆ ತರಲಾಯಿತು.

1. ಟ್ರ್ಯಾಕ್ಟರ್ ವಾಹನ ಸಂಖ್ಯೆ:ಕೆಎ-05 ಎ-9930 ರ ಟ್ರ್ಯಾಲಿ ಪ್ಲಾಟ್ ಫಾರಂ ಮತ್ತು ಬಾಡಿ ಪೂರ್ಣ ಆಳಾಗಿದ್ದು ಸದರಿಯ ದುರಸ್ಥಿಗಾಗಿ ಈ ಕಛೇರಿಯ ಕೊಟೇಶನ್ ಪ್ರಕಟಣೆ: ನಸರಾ/ಎಸ್‌ಡಬ್ಲ್ಯೂಎಂ/ಸಿಆರ್/24/2005-06 ದಿ:18-11-2006 ಕ್ಕೆ 2 ಟೆಂಡರ್‌ಗಳು ಬಂದಿದ್ದು ಕೃಷ್ಣ ಎಂಟರ್ ಪ್ರೈಸಸ್ಸ್, ಹೆಗ್ಗಡಗೆರೆ, ಬಿಡದಿ ಇವರು ನಮೂದಿಸಿರುವ ದರಕ್ಕಿಂತ ಮೆ॥ದೀಪಕ್ ಎಲೆಕ್ಟ್ರಿಕಲ್ಸ್, ರಾಮನಗರ ಇವರು ನಮೂದಿಸಿರುವ ದರವು ಕಡಿಮೆಯಿದ್ದು ಸದರಿಯವರ ಟೆಂಡರ್‌ನ್ನು ಅನುಮೋದಿಸಬಹುದೆಂದು ಘನತ್ಯಾಜ್ಯ ವಸ್ತು ಸಾಗಾಣಿಕೆಗೆ ವಾಹನ ಇಲ್ಲದೆ ಇದ್ದು ತೊಂದರೆಯಾಗಿರುವುದರಿಂದ ಜರೂರಾಗಿ ದುರಸ್ಥಿ ಮಾಡಿಸಲು ಸೂಚಿಸಲಾಯಿತು.

2. ಇಚರ್ ಕಂಪನಿಯ ಟಿಪ್ಪರ್ ಸಂ:ಕೆಎ-05 ಎ-6607 ರ ವಾಹನ ಪೂರ್ಣ ದುರಸ್ಥಿ ಇದ್ದ ಕಾರಣ ಈ ಕಛೇರಿಯ ಟೆಂಡರ್ ಪ್ರಕಟಣೆ ನಸರಾ/ಎಸ್‌ಡಬ್ಲ್ಯೂಎಂ/ಸಿಆರ್/13/2005-06 ದಿ:18-11-2006 ರಂತೆ ಟೆಂಡರ್ ಕರೆಯಲಾಗಿ 2 ಟೆಂಡರ್ ಬಂದಿದ್ದು ಎಂ.ಆರ್.ಮೋಟೋ ಟೆಕ್, ಬೆಂಗಳೂರು ಇವರು ನಮೂದಿಸಿರುವ ರೂ. 1,46,700/- ಗಿಂತ ಆಲೈಡ್ ಮೋಟಾರ್ಸ್, ಬೆಂಗಳೂರು ಇವರು ರೂ. 1,35,000/- ಗಳಿಗೆ ಟೆಂಡರ್ ದರ ನಮೂದಿಸಿದ್ದು ಇವರ ಟೆಂಡರ್ ಕಡಿಮೆ ದರದ್ದಾಗಿದ್ದು ಆಲೈಡ್ ಮೋಟಾರ್ಸ್, ಬೆಂಗಳೂರು ಇವರ ಟೆಂಡರ್ ನಮೂದಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಘನತ್ಯಾಜ್ಯ ವಸ್ತು ಸಾಗಾಣಿಕೆಗೆ ವಾಹನ ಇಲ್ಲದೆ ಇದ್ದು ತೊಂದರೆಯಾಗಿರುವುದರಿಂದ ಜರೂರಾಗಿ ದುರಸ್ಥಿ ಮಾಡಿಸಲು ಸೂಚಿಸಲಾಯಿತು.

3. ನಗರಸಭೆ ವಾಹನಗಳಿಗೆ ಅಗತ್ಯವಿರುವ ಟೈರು ಮತ್ತು ಬ್ಯಾಟರಿಗಳ ಸರಬರಾಜಿಗಾಗಿ ಬಂದಿರುವ ಕಡಿಮೆ ದರದ ಕೋಟೇಷನ್‌ನ್ನು ಒಪ್ಪಿ ತೀರ್ಮಾನಿಸಲಾಯಿತು.

Battery Quotation.

| Firm Name | Specification | Rate Quotated |
|---|---|---|
| 1. Jai Hind Auto Electrical work Channapatna | MHD 800 | 4507-00 |
| | MHD 99 | 5679-00 |
| 2. Battery Works, Bglr. | MHD 800 | 4695-00 |
| | MHD 99 | 5695-00 |
| 3. Stan sadar Bglr. | MHD 800 | 4796-00 |
| | MHD 99 | 5786-00 |

ಕಡಿಮೆ ದರದ ಕೋಟೆಷನ್ ಸಲ್ಲಿಸಿರುವ ಜೈ ಹಿಂದ್ ಆಟೋ ಎಲಿಕ್ಟ್ರಿಕಲ್ಸ್, ಚನ್ನಪಟ್ಟಣರವರ ಕೋಟೆಷನ್‌ನ್ನು ಅನುಮೋದಿಸಲಾಯಿತು.

ಟೈರ್ ಖರೀದಿಗಾಗಿ ಬಂದಿರುವ ಕೋಟೆಷನ್‌ಗಳು

| Firm Name | Specification | Rate Quotated |
|---|---|---|
| 1. Madhu Tyres, Ramanagara | CEAT 750-16 LVG XL 1+1+1 | 6500-00 |
| | CEAT 750 –16 RIB XL 1+1+1 | 6000-00 |
| 2. Raja dani Tyres, Bglr | CEAT 750-16 LVG XL 1+1+1 | 6650-00 |
| | CEAT 750 –16 RIB XL 1+1+1 | 6050-00 |
| 3. Ashok Tyres, Bglr | CEAT 750-16 LVG XL 1+1+1 | 6700-00 |
| | CEAT 750 –16 RIB XL 1+1+1 | 6100-00 |

PDF Created with deskPDF PDF Writer - Trial :: http://www.docudesk.com

ಕಡಿಮೆ ದರದ ಕೋಟೇಷನ್ ಸಲ್ಲಿಸಿರುವ ಮಧು ಟ್ರೈರ್ಸ್, ರಾಮನಗರರವರ ಕೋಟೇಷನ್‌ನ್ನು ಅನುಮೋದಿಸಲಾಯಿತು.

4. ನಗರಸಭೆ ವಾಹನ ಕೆಎ–05 ಎ–803 ರಿಪೇರಿಗೆ ಬಂದ ಕಾರಣ ಘನತ್ಯಾಜ್ಯ ವಸ್ತು ವಿಲೇವಾರಿಗೆ ತೊಂದರೆಯಾಗುವುದನ್ನು ಮನಗಂಡು ಟೆಂಡರ್ ಕರೆದು ರೂ.22,613/–ಗಳಿಗೆ ದುರಸ್ಥಿ ಮಾಡಿಸಿರುವುದನ್ನು ಸಭೆಯು ಅನುಸಮರ್ಥನಗೊಳಿಸಿತು.

ವಿಷಯ 83:– ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಪತ್ರದ ಸಂ: ಎಂಯುಎನ್(2)ಸಿಆರ್/111/06–07 ದಿ:6–11–07 ಹಾಗೂ ಮುಖ್ಯಮಂತ್ರಿಗಳ ಕಾರ್ಯದರ್ಶಿಗಳವರ ಟಿಪ್ಪಣಿಯಂತೆ ರಾಮನಗರ ಗಂಗಾ ಪರಮೇಶ್ವರಿ ಗಂಗಾಮತಸ್ಥರ (ಬೆಸ್ತರ ಸಂಘ) (ರಿ) ಕಛೇರಿ ಸ್ಥಾಪನೆಗಾಗಿ ನಿವೇಶನ ಮಂಜೂರು ಮಾಡಲು ಕೋರಿರುವ ಪತ್ರದ ವಿಚಾರ.

ತೀರ್ಮಾನ 83:–ಸಭೆಗೆ ನಿವೇಶನ ಕೋರಿ ಬಂದಿರುವ ಪತ್ರವನ್ನು ಓದಿ ವಿವರಿಸಲಾಯಿತು. ನಂತರ ಸಭೆಯು ಪರಿಶೀಲಿಸಿತು. ನಗರಸಭೆಯು ಹೊಂದಿರುವ ನಿವೇಶನವನ್ನು ಪತ್ತೆ ಹಚ್ಚಿ ಪೂರ್ಣ ವಿವರಗಳೊಡನೆ ಮುಂದಿನ ಸಭೆಗೆ ತರುವುದೆಂದು ತೀರ್ಮಾನಿಸಲಾಯಿತು.

ವಿಷಯ 84:– ಈ ನಗರಸಭೆಯ ಶೇ% 18 ರ ಬಾಬ್ತಿಗೆ ಕಾಯ್ದಿರಿಸಿದ ಮೊಬಲಗನ್ನು ಹಿಂದಿನಿಂದಲೂ ಕಾರಣಾಂತರಗಳಿಂದ ಕಾಮಗಾರಿಗಳನ್ನು ನಿರ್ವಹಿಸಲಾಗದೆ ಬಾಕಿ ಉಳಿದುಕೊಂಡು ಬಂದಿದ್ದು, ನಿರ್ವಹಿಸಬಹುದಾದ ಕಾಮಗಾರಿಗಳನ್ನು ಉಳಿಸಿ ಕೊಂಡು ಕೆಲಸ ನಿರ್ವಹಿಸಲು ಸಾಧ್ಯವಾಗದ ಕಾಮಗಾರಿಗಳನ್ನು ರದ್ದುಪಡಿಸಿ ಉಳಿಕೆ ಮೊಬಲಗಿಗೆ ಹೊಸದಾಗಿ ಕ್ರಿಯಾಯೋಜನೆ ತಯಾರಿಸಿ ಅನುಮೋದನೆಗಾಗಿ ಸಲ್ಲಿಸುವ ವಿಚಾರ ಪರಿಶೀಲನೆ.

ತೀರ್ಮಾನ 84:– ವಿಷಯದ ಬಗ್ಗೆ ಸಭೆಯು ಪರಿಶೀಲಿಸಿತು. 2006ರ ನವಂಬರ್ ಅಂತ್ಯಕ್ಕೆ ಪ.ಜಾ/ಪ.ಪಂ ಕ್ಷೇಮಾಭಿವೃದ್ಧಿಗಾಗಿ ಮೀಸಲಿಟ್ಟಿರುವ ಹಣದಲ್ಲಿ ಸುಮಾರು 29.58 ಲಕ್ಷ ರೂ.ಗಳು ಬಾಕಿ ಉಳಿದಿದ್ದು ಇದರಲ್ಲಿ 15.42 ಲಕ್ಷ ರೂ.ಗಳ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಉಳಿದ 14.16 ಲಕ್ಷ ರೂ.ಗಳಲ್ಲಿ ಹಿಂದಿನಿಂದಲೂ ಮಾಡಿರುವ ಕೆಲಸಗಳಲ್ಲಿ ಉಳಿತಾಯವಾಗಿರುವ ಹಣ ರೂ. 2.26 ಲಕ್ಷಗಳು, ಕೆಲವಾರು ಕಾರಣಗಳಿಂದ ಮಂಜೂರಾಗಿರುವ 5 ಕಾಮಗಾರಿಗಳನ್ನು ಬದಲಾವಣೆ ಮಾಡಬೇಕಾಗಿರುವುದರಿಂದ ಈ ಕಾಮಗಾರಿಗಳ ಅಂದಾಜು 2.01 ಲಕ್ಷಗಳು ಮತ್ತು ಬಹಳ ಹಿಂದಿನಿಂದಲೂ ಕೆಲವಾರು ಕಾಮಗಾರಿಗಳನ್ನು ಮಾಡದೇ ಉಳಿದುಕೊಂಡು ಬಂದಿದ್ದು ಆಗಿನ ಅಂದಾಜಿನಲ್ಲಿ ಕೆಲಗಳನ್ನು ಮಾಡಿಸಲು ಸಾದ್ಯವಾಗದೇ ಇರುವ ಕಾರಣ ಈ ಬಾಬ್ತು ಬಾಕಿ ರೂ. 9.89 ಲಕ್ಷಗಳು. ಹೀಗೆ ಒಟ್ಟು 14.16 ಲಕ್ಷಗಳಿಗೆ ಕೆಳಕಂಡಂತೆ ಕ್ರಿಯಾಯೋಜನೆಯನ್ನು ತಯಾರಿಸಿ ಅನಿಮೋದಿಸಲಾಯಿತು. ಈ ಕಾಮಗಾರಿಗಳು ತುರ್ತು ಅವಶ್ಯಕತೆ ಇರುವುದರಿಂದ ಇಲಾಖಾ ವತಿಯಿಂದ ಮಾಡಿಸಲು ಅನುಮತಿಯನ್ನು ಮತ್ತು ಕ್ರಿಯಾ ಯೋಜನೆಗೆ ಅನುಮತಿಯನ್ನು ದೊರಕಿಸಿಕೊಡವಂತೆ ಮಾನ್ಯ ಜಿಲ್ಲಾಧಿಕಾರಿಗಳವರನ್ನು ಕೋರಿಕೊಳ್ಳುವುದೆಂದು ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಿತು.

| ಕ್ರ.ಸಂ | ಕಾಮಗಾರಿಗಳ ವಿವರ | ಅಂದಾಜು ಮೊತ್ತ |
|---|---|---|
| 1 | ಪ.ಜಾ/ಪ.ಪಂ ದವರ ವಿದ್ಯಾರ್ಥಿನಿಲಯಕ್ಕೆ ಸೋಲಾರ್‌ವಾಟರ್ ಹೀಟರ್ ಅಳವಡಿಸುವುದು. (ಪ್ಲಂಬಿಂಗ್ ಕೆಲಸ ಸೇರಿ) | 2,50,000–00 |
| 2 | ಪ.ಜಾ/ಪ.ಪಂ ಸಂಘ ಸಂಸ್ಥೆಗಳವರಿಗೆ ಪೀಠೋಪಕರಣಗಳನ್ನು ಹಾಗೂ ಸಲಕರಣೆಗಳನ್ನು ಖರೀದಿಸಿ ನೀಡುವುದು. | 50,000–00 |
| 3 | ಪ.ಜಾ/ಪ.ಪಂ ದವರದ ವಿದ್ಯಾಬ್ಯಾಸ ಮಾಡುತ್ತಿರುವ ಮತ್ತು ಪೌರಕಾರ್ಮಿಕ ಮಕ್ಕಳಿಗೆ ಸೈಕಲ್ ವಿತರಣೆ | 2,20,000–00 |

PDF Created with deskPDF PDF Writer - Trial :: http://www.docudesk.com

| | | |
|---|---|---|
| 4 | ವಾರ್ಡ್ ನಂ.3 ರ ಗಾಂಧೀನಗರದ ಮುಖ್ಯರಸ್ತೆಯಿಂದ 1 ನೇ ಅಡ್ಡರಸ್ತೆವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ | 75,000–00 |
| 5 | ವಾರ್ಡ್ ನಂ 17 ರ ಬಾಲಗೇರಿ ಬಂಡಾರಮ್ಮನ ದೇವಸ್ಥಾನದ ಮುಂಭಾಗ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿ. | 1,99,000–00 |
| 6 | ವಾರ್ಡ್ ನಂ. 25ರ ಕೋಡೀಪುರ ಬಸವಯ್ಯನ ಮನೆ ಹತ್ತಿರ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿ. | 1,10,000–00 |
| 7 | ವಾರ್ಡ್ ನಂ13 ರ ಬೆಟ್ಟಯ್ಯನ ಮನೆ ಮತ್ತು ತಿಮ್ಮಯ್ಯನ ಮನೆ ಹತ್ತಿರ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿ | 1,28,000–00 |
| 8 | ವಾರ್ಡ್ ನಂ.2 ರ ಅಂಬೇಡ್ಕರ್‌ನಗರದ ಅಡ್ಡರಸ್ತೆಗಳನ್ನು ಅಭಿವೃದ್ದಿಪಡಿಸುವದು | 1,16,000–00 |
| 9 | ವಾರ್ಡ್ ನಂ.26 ರಲ್ಲಿ ಬರುವ ಇಂದಿರಾನಗರದ ಸಮುದಾಯಭವನದ ದಕ್ಷಿಣ ಭಾಗದಲ್ಲಿ ಬರುವ ರಸ್ತೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ | 1,66,000–00 |
| 10 | ಪ.ಜಾ/ಪ.ಪಂ ದವರ ಮಕ್ಕಳು ಅಭ್ಯಸಿಸುವ ಅಂಗನವಾಡಿ ಕೇಂದ್ರಗಳಿಗೆ ಪೀಠೋಪಕರಣ ಖರೀದಿಸಿ ನೀಡುವುದು. | 1,02,000–00 |
| | ಒಟ್ಟು | 14,16,000–00 |

ವಿಷಯ 85:–ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು ಕೆ.ಯು.ಡಬ್ಲ್ಯೂ.ಎಸ್ & ಡಿ.ಬಿ ಇವರು ದಿ: 16–11–06 ರಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕೆ.ಯು.ಡಬ್ಲ್ಯೂ.ಎಸ್ & ಡಿ.ಬಿ ಚನ್ನಪಟ್ಟಣ ಇವರು ಪತ್ರ ಬರೆದು ಒಳಚರಂಡಿ ವ್ಯವಸ್ಥೆ ಹಾಗೂ 7.5 ಎಂಎಲ್‌ಡಿ ಸಾರ್ಮಥ್ಯದ ಕೊಳಚೆ ನೀರು ಶುದ್ದೀಕರಣದ ನಿರ್ವಹಣೆ ಬಾಬ್ತು 2005–06ನೇ ಸಾಲಿಗೆ ಬಾಕಿ ರೂ. 9,50,400/– ಗಳನ್ನು ಬಿಡುಗಡೆ ಮಾಡಲು ಮತ್ತು 2006–07ನೇ ಸಾಲಿನ ನಿರ್ವಹಣೆ ಬಾಬ್ತು 26.80 ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಿರುವ ವಿಚಾರ ಪರಿಶೀಲನೆ.

ತೀರ್ಮಾನ 85:–ಕೆ.ಯು.ಡಬ್ಲ್ಯೂ.ಎಸ್ & ಡಿ.ಬಿ ಗೆ ಸಂಬಂಧಿಸಿದ ವಿಷಯ 88 ರಲ್ಲಿ ಪ್ರಸ್ತಾಪವಾಗಿದ್ದು ತೀರ್ಮಾನವನ್ನು 88 ರಲ್ಲಿ ತೆಗೆದುಕೊಳ್ಳಲಾಗಿದೆ.

ವಿಷಯ 86:–ಶ್ರೀ ಸತ್ಯವೇಲು ಬಿನ್ ಸಿದ್ದಲಿಂಗಯ್ಯ, ಬಾಲಗೇರಿ ಇವರಿಗೆ ಹೃದಯ ಶಸ್ತ್ರಚಿಕಿತ್ಸೆಗಾಗಿ ಸಭೆಯಲ್ಲಿ ಅನುಸಮರ್ಥನಗೊಳಿಸುವ ಮೇರೆಗೆ ಶೇ. 18 ರ ಮೊಬಲಗಿನಲ್ಲಿ ರೂ. 25,000/–ಗಳನ್ನು ಜಯದೇವ ಹೃದ್ರೋಗ ಆಸ್ಪತ್ರೆಗೆ ಪಾವತಿಸುವುದನ್ನು ಅನುಸಮರ್ಥನಗೊಳಿಸುವ ವಿಚಾರ.

ತೀರ್ಮಾನ 86:–ಸಭೆಯು ಒಪ್ಪಿ ಸರ್ವಾನುಮತದಿಂದ ಅನುಸಮರ್ಥನಗೊಳಿಸಿತು.

ವಿಷಯ 87:–ಶೇ% 18 ರ ನಿಧಿಯಡಿಯಲ್ಲಿ ಉನ್ನತ ವ್ಯಾಸಂಗಕ್ಕಾಗಿ ಬಂದಿರುವ ಸಹಾಯಧನ ಕೋರಿ ಅರ್ಜಿಗಳನ್ನು ಪರಿಶೀಲಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

| | | | |
|---|---|---|---|
| 1 | ಶ್ರೀ ಮರಿಸ್ವಾಮಿ ಬಿನ್ ನಂಜಯ್ಯ ರಾಯರದೊಡ್ಡಿ, ರಾಮನಗರ | ಪಿ.ಜಿ. ಡಿಪ್ಲೋಮಾ ಇನ್ (ಎಸ್‌ಆರ್‌ಎಂ) | ಎಂ.ಇ.ಎಸ್ ಕಾಲೇಜ್ ಮಲ್ಲೇಶ್ವರಂ, ಬೆಂಗಳೂರು |
| 2 | ರಾಜಯ್ಯ ಬಿನ್ ನಚಿಜಯ್ಯ ರಾಯರದೊಡ್ಡಿ, ರಾಮನಗರ | ಎಲ್.ಎಲ್.ಬಿ 10ನೇ ಸೆಮಿಸ್ಟರ್ 5ನೇ ವರ್ಷ | ಬಿ.ಇ.ಎಸ್. ಕಾಲೇಜ್ ಆಫ್ ಲಾ, ಬೆಂಗಳೂರು |
| 3 | ಕು॥ ಭವ್ಯ ಕೋಂ ರಂಗಸ್ವಾಮಿ ಐಜೂರು, ರಾಮನಗರ | ಎಂ.ಎ. ಕನ್ನಡ | ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ |

PDF Created with deskPDF PDF Writer - Trial :: http://www.docudesk.com

ತೀರ್ಮಾನ 87:- ಕ್ರ.ಸಂ. 2ನ್ನು ಹೊರತುಪಡಿಸಿ ಕ್ರ.ಸಂ. 1 & 3 ರ ಅಭ್ಯರ್ಥಿಗಳಿಂದ ಅಗತ್ಯ ದಾಖಲೆಗಳನ್ನು ಪಡೆದು ವಿದ್ಯಾಭ್ಯಾಸ ಖರ್ಚಿಗಾಗಿ ಸಹಾಯಧನ ಮಂಜೂರು ಮಾಡಲು ಪೌರಾಯುಕ್ತರಿಗೆ ಸಭೆಯು ಅಧಿಕಾರ ನೀಡಿತು.

ವಿಷಯ 88:-ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು ರವರು, ರಾಮನಗರ ಒಳಚರಂಡಿ ವ್ಯವಸ್ಥೆಗೆ 2006-07ನೇ ಸಾಲಿಗೆ ತಯಾರಿಸಿರುವ ಅಂದಾಜು ರೂ. 41.00 ಲಕ್ಷಗಳಿಗೆ ಮಂಜೂರಾತಿ ನೀಡುವ ವಿಚಾರ.

ತೀರ್ಮಾನ 88:-ವಿಷಯದ ಬಗ್ಗೆ ಸಭೆಯು ಕೂಲಂಕುಷವಾಗಿ ಚರ್ಚಿಸಿತು. ಎ.ಡಿ.ಬಿ ಯೋಜನೆಯಡಿ ಕೆ.ಯು.ಐ.ಡಿ.ಎಫ್.ಸಿ ಮೂಲಕ ರಾಮನಗರ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆಯನ್ನು ನಿರ್ವಹಿಸಲಾಗಿದೆ ನಂತರ ಕೆ.ಯು.ಡಬ್ಲ್ಯೂ.ಎಸ್ & ಡಿ.ಬಿ ರವರು ನಿರ್ವಹಣೆ ಕೆಲಸ ಮಾಡುತ್ತಿದ್ದು ಸದರಿ ಯೋಜನೆ ನಿರ್ವಹಣೆಯನ್ನು ನಗರಸಭೆಗೆ ಹಸ್ತಾಂತರಿಸಿಕೊಳ್ಳುವಂತೆ ಹಾಗೂ ವಿಷಯ 85 ಮತ್ತು 88 ರಲ್ಲಿ ಪ್ರಸ್ತಾಪಿಸಿರುವ ನಿರ್ವಹಣಾ ವೆಚ್ಚವನ್ನು ಪಾವತಿಸುವಂತೆ ಕೋರಿ ಕೆ.ಯು.ಡಬ್ಲ್ಯೂ.ಎಸ್ & ಡಿ.ಬಿ ಅಧಿಕಾರಿಗಳು ಪತ್ರಗಳನ್ನು ಬರೆಯುತ್ತಿದ್ದಾರೆ. ಸರ್ಕಾರದಿಂದ ಒಳಚರಂಡಿ ಯೋಜನೆಯನ್ನು ಹಸ್ತಾಂತರಿಸಿಕೊಳ್ಳಲು ಮತ್ತು ನಿರ್ವಹಣೆ ವೆಚ್ಚವನ್ನು ಭರಿಸಲು ಯಾವುದೇ ಆದೇಶ ಸಾದರಾಗಿರುವುದಿಲ್ಲ. ಅಲ್ಲದೇ ನಗರಸಭೆ ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲದ ಕಾರಣ ನಿರ್ವಹಣಾ ವೆಚ್ಚ ಮತ್ತು ದುರಸ್ಥಿ ವೆಚ್ಚ ಪಾವತಿಸಲು ಸಾಧ್ಯವಾಗುವುದಿಲ್ಲ. ವಿಷಯ 85 ರಲ್ಲಿ ವಿವರಿಸಿರುವ 2005-06 ನೇ ಸಾಲಿನ ನಿರ್ವಹಣೆ ವೆಚ್ಚ ರೂ. 9,50,400/- ಮತ್ತು ವಿಷಯ 88 ರಲ್ಲಿ ವಿವರಿಸಿರುವ 2006-07 ನೇ ನಿರ್ವಹಣೆ ಮತ್ತು ದುರಸ್ಥಿ ಅಂದಾಜು ಬಾಬ್ತು ರೂ. 41.00 ಲಕ್ಷಕ್ಕೆ ಸಲ್ಲಿಸಿದ್ದು ಸದರಿ ಕ್ರಿಯಾಯೋಜನೆಯಲ್ಲಿ ಸಂಪರ್ಕ ರಸ್ತೆ ನಿರ್ಮಾಣಕ್ಕೆ ಅಂದಾಜು ವೆಚ್ಚ ರೂ. 2.50 ಲಕ್ಷಗಳು ಮತ್ತು ಸಕ್ಕಿಂಗ್ ಯಂತ್ರ ವಾರ್ಷಿಕ ನಿರ್ವಹಣೆಗಾಗಿ ತಯಾರಿಸಿರುವ ಅಂದಾಜು ರೂ. 9.00 ಲಕ್ಷಗಳನ್ನು ಹೊರತುಪಡಿಸಿ (ಸಂಪರ್ಕ ರಸ್ತೆ ನಗರಸಭೆ ಯಿಂದಲೇ ಮಾಡಿರುವುದರಿಂದ ಮತ್ತು ಸಕ್ಕಿಂಗ್ ಯಂತ್ರವನ್ನು ನಗರಸಭೆ ನಿರ್ವಹಿಸುತ್ತಿರುವುದರಿಂದ) ಬಾಕಿ ಮೊಬಲಗು ರೂ. 33.50 ಲಕ್ಷಗಳಿಗೆ ಅನುಮೋದಿಸಲಾಯಿತು. 2005-06 ನೇ ಸಾಲಿನ ನಿರ್ವಹಣೆ ವೆಚ್ಚ ರೂ. 9,50,400/- ಹಾಗೂ 2006-07 ನೇ ನಿರ್ವಹಣೆ ಮತ್ತು ದುರಸ್ಥಿ ರೂ. 33.50 ಲಕ್ಷಗಳು ಒಟ್ಟು ರೂ. 43,00,400/- ಗಳನ್ನು ಈ ನಗರಸಭೆಗೆ ಬಿಡುಗಡೆಯಾಗುವ ಎಸ್.ಎಫ್.ಸಿ ಅನುದಾನದಡಿ ಬಿಡುಗಡೆ ಮಾಡುವಂತೆ ಸರ್ಕಾರವನ್ನು ಕೋರಿಕೊಳ್ಳುವುದೆಂದು ಸಭೆಯು ಒಪ್ಪಿ ಸರ್ವಾನುಮತದಿಂದ ತೀರ್ಮಾನಿಸಿತು ಹಾಗು ಮಂಜೂರಾತಿ ನೀಡಲಾಯಿತು. ಜರೂರಾಗಿ ಕಾಮಗಾರಿ ಕೆಲಸ ನಿರ್ವಹಿಸಲು ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು ರವರನ್ನು ಕೋರಿಕೊಳ್ಳುವುದೆಂದು ತೀರ್ಮಾನಿಸಲಾಯಿತು.

ನಂತರ ಸಭೆಯು ಸುದೀರ್ಘವಾಗಿ ಚರ್ಚಿಸಿದ್ದು ಸದಸ್ಯರಾದ ಶ್ರೀ. ಸೋಮಶೇಖರ್ ರವರು ಮಾತನಾಡಿ ಬಾಲಗೇರಿಯಲ್ಲಿ ಸುಮಾರು 1 1/2 ತಿಂಗಳ ಹಿಂದೆ ಬಾಲಗೇರಿಯಲ್ಲಿ ಕೆಟ್ಟಿರುವ ಬೋರ್‌ವೆಲ್‌ನ್ನು ದುರಸ್ಥಿ ಪಡಿಸಲು ಸೂಚಿಸಿ ದೂರು ಪುಸ್ತಕದಲ್ಲಿ ದಾಖಲಿಸಿದ್ದರೂ ಇದುವರೆಗೂ ರಿಪೇರಿ ಮಾಡಿಲ್ಲವೆಂದು ತಿಳಿಸಿದರು. ಮತ್ತು ಕಾವೇರಿ ನೀರನ್ನು ಬಾಲಗೇರಿಗೆ ನೀಡುತ್ತಿಲ್ಲವೆಂದು ಸಾರ್ವಜನಿಕರಿಗೆ ನೀರಿನ ತೊಂದರೆಯಾಗುತ್ತದೆಂದು ತಿಳಿಸಿದರು. ಸದಸ್ಯರಾದ ಲತಾ ರವರು ದ್ವನಿಗೂಡಿಸಿದರು. ಸದಸ್ಯರಾದ ಶ್ರೀ.ಶೇಷಾದ್ರಿ ರವರು ಮಾತನಾಡಿ ಕೆ.ಯು.ಡಬ್ಲ್ಯೂ.ಎಸ್ & ಡಿ.ಬಿ ಅಧಿಕಾರಿಗಳು ನೀರು ಸರಬರಾಜು ವ್ಯವಸ್ಥೆಯನ್ನು ವಹಿಸಿಕೊಂಡಂದಿನಿಂದ ಪ್ರತಿ ಸಭೆಯಲ್ಲೂ ಬರವಸೆ ನೀಡುತ್ತಾ ಬಂದಿರುತ್ತಾರೆ ವಿನ: ಯಾವುದನ್ನು ಕಾರ್ಯಗತ ಗೊಳಿಸಿಲ್ಲ. ಆಡಳಿತ ಬಿಗಿ ತಪ್ಪುತ್ತಿದೆ, ನೀರು ಸರಬರಾಜು ವ್ಯವಸ್ಥೆ ನಿರ್ವಹಿಸುತ್ತಿರುವ ನೌಕರರುಗಳಿಗೆ ನಗರಸಭೆಯಿಂದಲೇ ವೇತನ ಭರಿಸಲಾಗುತ್ತಿದೆ. ಕೆ.ಯು.ಡಬ್ಲ್ಯೂ.ಎಸ್ & ಡಿ.ಬಿ ಅಧಿಕಾರಿಗಳು ನಿರ್ವಹಿಸುವುದಾದರೂ

PDF Created with deskPDF PDF Writer - Trial :: http://www.docudesk.com

ಏನು ಎಂದು ಆಕ್ಷೇಪ ವ್ಯಕ್ತಪಡಿಸಿದರು. ಸದಸ್ಯರಾದ ಶ್ರೀ.ಉಮೇಶ್ ರವರು ಮಾತನಾಡಿ ನೀರು ಸರಬರಾಜು ವ್ಯವಸ್ಥೆಯನ್ನು ವಹಿಸಿಕೊಂಡ ಸಂದರ್ಭದಲ್ಲಿ ನಡೆದ ಸಭೆಯಲ್ಲಿ ಕಾವೇರಿ ನೀರಿನ ವ್ಯವಸ್ಥೆ ಸರಿಯಾಗುವವರೆಗೆ ಕೊಳವೆ ಬಾವಿ ಮತ್ತು ಮಿನಿ ಟ್ಯಾಂಕ್ ಸಂಪರ್ಕಗಳನ್ನು ನಿಲ್ಲಿಸಬಾರದೆಂದು ಕೋರಿದ್ದರೂ ಕೆ.ಯು.ಡಬ್ಲ್ಯೂ.ಎಸ್ & ಡಿ.ಬಿ ಅಧಿಕಾರಿಗಳು ಗಣನೆಗೆ ತೆಗೆದುಕೊಂಡಿಲ್ಲವೆಂದು ಆಪಾದಿಸಿದರು. ಸದಸ್ಯರಾದ ಶ್ರೀ.ಭಾಸ್ಕರ್ ರವರು ಮಾತನಾಡಿ ಮಾನ್ಯ ಸದಸ್ಯರುಗಳು ಆಪಾದಿಸುವುದನ್ನು ನೋಡಿದರೆ ಕೆ.ಯು.ಡಬ್ಲ್ಯೂ.ಎಸ್ & ಡಿ.ಬಿ ಅಧಿಕಾರಿಗಳು ಸಮರ್ಪಕವಾಗಿ ನೀರು ಸರಬರಾಜು ವ್ಯವಸ್ಥೆಯನ್ನು ನಿರ್ವಹಿಸುತ್ತಿಲ್ಲವಾದ್ದರಿಂದ ನಗರಸಭೆಗೆ ವಹಿಸಿಕೊಳ್ಳುವುದು ಸೂಕ್ತವೆಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ನಂತರ ಸಭೆಯು ಸದಸ್ಯರಾದ ಶ್ರೀ.ಭಾಸ್ಕರ್ ರವರ ಅಭಿಪ್ರಾಯವನ್ನು ಸರ್ವಾನುಮತದಿಂದ ಅನುಮೋದಿಸಿ ನಗರಸಭೆಗೆ ವಹಿಸಿಕೊಡಲು ಸರ್ಕಾರದ ಅನುಮತಿ ಕೋರುವುದೆಂದು ತೀರ್ಮಾನಿಸಲಾಯಿತು.

ವಿಷಯ 89:-ರಾಮನಗರ ನಗರಸಭೆಯ ವಾರ್ಡ್ ನಂ.12 ರ ಮುನಿಸಿಪಲ್ ಖಾತೆ ನಂ. 9/4144/1 ರ ಸ್ವತ್ತು 15 X 60 ಅಡಿಗಳ ನಗರಸಭಾ ನಿವೇಶನವನ್ನು ರಾಮನಗರ ಮುಸ್ಲಿಂ ಗ್ರಾಜುಯೇಟ್ ಪೋರಂ ರವರಿಗೆ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ಮಾನ್ಯ ಜಿಲ್ಲಾಧಿಕಾರಿಯವರಿಗೆ ಸಲ್ಲಿಸುವ ವಿಚಾರ.

ತೀರ್ಮಾನ 89:- ಪೌರಾಯುಕ್ತರು ವಿಷಯದ ಬಗ್ಗೆ ಸಭೆಗೆ ವಿವರಿಸಿದರು. ನಂತರ ಸಭೆಯು ಕೂಲಂಕುಷವಾಗಿ ವಿಷಯದ ಬಗ್ಗೆ ಪರಿಶೀಲಿಸಿ ಮುಸ್ಲೀಂ ಗ್ರಾಜುಯೇಟ್ ಫೋರಂರವರು ದಿನಾಂಕ: 30-01-06 ರಂದು ಈ ಕಛೇರಿಗೆ ಅರ್ಜಿ ಸಲ್ಲಿಸಿ ಈ ಹಿಂದೆ ಅಂದರೆ ದಿನಾಂಕ: 29-11-00 ರಂದು ನಡೆದ ನಗರಸಭಾ ನಿರ್ಣಯದ ಪ್ರಕಾರ, ನಗರಸಭೆಯ ಖಾತೆ ಸಂ: 30/1/4144/1 ರ ಅಳತೆ 15.60 ಅಡಿಗಳ ನಿವೇಶನವನ್ನು ಖಾತೆ ಮಾಡಿಕೊಡಬೇಕೆಂದು ನೀಡಿರುವ ಅರ್ಜಿಯ ಮೇರೆಗೆ ಕಡತವನ್ನು ಪರಿಶೀಲಿಸಲಾಗಿ ಸದರಿ ನಿವೇಶನವು ಮುಸ್ಲೀಂ ಯೂತ್ ಫೋರಂಗೆ, ಸರ್ಕಾರದಿಂದ ಮಂಜೂರಾಗದೇ ಇದ್ದು ಕರ್ನಾಟಕ ಪುರಸಭೆಗಳ ಅಧಿನಿಯಮ 1964 ನಿಯಮ 39 ರ ಮೇರೆಗೆ ಪತ್ರಿಕಾ ಪ್ರಕಟಣೆ ಹೊರಡಿಸಿದ ಸಂಧರ್ಭದಲ್ಲಿ ಶ್ರೀ. ಜಯಪುರುಶೋತ್ತಮ ಎಂಬುವರು ಸದರಿ ನಿವೇಶನದ ಮಂಜೂರಾತಿಗಾಗಿ ತಮ್ಮ ಆಕ್ಷೇಪಣೆಯನ್ನು ದಿ:17-6-2006 ರಂದು ಸಲ್ಲಿಸಿದ್ದು ಸದರಿ ಆಕ್ಷೇಪಣೆಯನ್ನು ಪರಿಶೀಲಿಸಲಾಗಿ, ಈ ಹಿಂದೆಯೇ ಅಂದರೆ 27-7-2000 ರಂದೇ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪತ್ರಕರ್ತರ ಸಂಘದವರು ತಮ್ಮ ಕಾರ್ಯಕಾರಿ ಸಮಿತಿ ಸಭೆಯ ಠರಾವನ್ನು ಲಗತ್ತಿಸಿ, ಸದರಿ ನಿವೇಶನವು ತಮ್ಮ ಸಂಘಕ್ಕೆ ಸೂಕ್ತವಲ್ಲದ ಕಾರಣ, ತಮಗೆ ಬೇರೆ ನಿವೇಶನವನ್ನು ಕೊಡಬಹುದೆಂದು ಒಪ್ಪಿಗೆ ಪತ್ರ ಕೊಟ್ಟಿರುವ ಮೇರೆಗೆ ಶ್ರೀ. ಜಯಪುರುಶೋತ್ತಮ ರವರು ಕೊಟ್ಟಿರುವ ಆಕ್ಷೇಪಣೆಯನ್ನು ಸಭೆಯು ತಿರಸ್ಕರಿಸಿತು. ಉಪನೊಂದಣಾಧಿಕಾರಿಗಳ ಮೌಲ್ಯ ನಿರ್ಧರಣಾ ಪತ್ರ, ನಗರ ಯೋಜನಾ ಸಹಾಯಕರ ಅಭಿಪ್ರಾಯ ಅನುಸರಿಸಿ ಹಾಗೂ ಉಳಿದ ಎಲ್ಲಾ ಮಾಹಿತಿಗಳ ಪ್ರಕಾರ ಸದರಿ ನಿವೇಶನವನ್ನು ಮುಸ್ಲೀಂ ಗ್ರಾಜುಯೇಟ್ ಸರ್ಕಾರ ಸುತ್ತೋಲೆ ಕ್ರ.ಸಂ: ಸರ್ಕಾರಿ ಆದೇಶ ನಂ:ನಆಇ/295/ಟಿಎಂಡಿ/2002 ದಿ:2-6-2003 ರಂತೆ, ಕರ್ನಾಟಕ ಪುರಸಭಾ ಕಾಯ್ದೆ 1972:2ರ ಪ್ರಕಾರ, ಮಂಜೂರು ಮಾಡಲು, ಮಾನ್ಯ ಜಿಲ್ಲಾಧಿಕಾರಿಗಳವರಿಗೆ ಪ್ರಸ್ತಾವನೆ ಸಲ್ಲಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ 90:- ಅಂಬೇಡ್ಕರ್ ಭವನದ ಬಾಡಿಗೆ ಮರು ಪರಿಶೀಲನೆ ಸಂದರ್ಭದಲ್ಲಿ ನಗರಸಭೆ ಠರಾವು ಸಂ:50 ದಿ:24-9-2005 ರಲ್ಲಿ ಪ್ರತಿ ಕಾರ್ಯಕ್ರಮಕ್ಕೆ ವಿದ್ಯುತ್ ಬಳಕೆಗಾಗಿ 1000 ರೂ ಹೆಚ್ಚಿಗೆ ಪಡೆಯಲು ತೀರ್ಮಾನವಾಗಿರುತ್ತದೆ. ಈ ಸಂಬಂಧ ಲೆಕ್ಕ ತಪಾಸಣೆಯಲ್ಲಿ ಒಂದು ದಿನದ ಕಾರ್ಯಕ್ರಮಕ್ಕೂ 1000 ರೂ. ವಿದ್ಯುತ್‌ಚ್ಛಕ್ತಿ ಬಳಕೆ ಮೊಬಲಗನ್ನು ಪಡೆದಿಲ್ಲವೆಂದು ಆಕ್ಷೇಪಣೆ ವ್ಯಕ್ತಪಡಿಸಿ ವಸೂಲಾತಿಗೆ ಸೂಚಿಸಿರುತ್ತಾರೆ. ಆದುದರಿಂದ ಒಂದು ದಿನದ ಕಾರ್ಯಕ್ರಮದಲ್ಲಿ ವಿದ್ಯುತ್‌ಚ್ಛಕ್ತಿ ಬಳಸುತ್ತಿರುವುದಿಲ್ಲವಾದ್ದರಿಂದ ಒಂದು ದಿನದ ಕಾರ್ಯಕ್ರಮ ಹೊರತುಪಡಿಸಿ ಮದುವೆ

PDF Created with deskPDF PDF Writer - Trial :: http://www.docudesk.com

ಕಾರ್ಯಕ್ರಮಗಳಿಗೆ ಮಾತ್ರ ಎಂಬುದಾಗಿ ತಿದ್ದುಪಡಿ ಮಾಡಲು ಹಾಗು ಪೂರ್ವಾನ್ವಯವಾಗುವಂತೆ ತೀರ್ಮಾನ ಕೈಗೊಳ್ಳುವ ವಿಚಾರ.

ತೀರ್ಮಾನ 90:–ವಿಷಯದ ಬಗ್ಗೆ ಪ್ರಸ್ತಾಪಿಸಲಾಯಿತು. 1 ದಿನದ ಕಾರ್ಯಕ್ರಮಕ್ಕೆ ನಿಗಧಿತ ಶುಲ್ಕ ಪಾವತಿ ಮಾಡುವುದರಿಂದ ವಿದ್ಯುಚ್ಛಕ್ತಿ ಬಳಕೆ ಶುಲ್ಕ ಪಡೆಯುವ ಅಗತ್ಯವಿಲ್ಲವೆಂದು ಮದುವೆ ಕಾರ್ಯಕ್ರಮಗಳಿಗೆ ಮಾತ್ರ ಪಡೆಯುವುದೆಂದು ಈ ತೀರ್ಮಾನ ಪೂರ್ವಾನ್ವಯವಾಗುವಂತೆ ಜಾರಿಗೆ ನೀಡುವುದೆಂದು ಸಭೆಯು ಒಪ್ಪಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ 91:– ದಿ:17–6–2006 ರ ಸಭೆ ಠರಾವು ಸಂಖ್ಯೆ 28 ರಲ್ಲಿ ಮಂಜೂರಾತಿ ಪಡೆದಿರುವ ಕಾಮಗಾರಿ "ವಾರ್ಡ್ ನಂ.1 ರ ಬಿ.ಎಂ.ರಸ್ತೆಯಿಂದ ಗ್ಯಾಸ್‌ಗೋಡನ್ ತನಕ ರಸ್ತೆ ಅಭಿವೃದ್ಧಿಪಡಿಸುವ ಕಾಮಗಾರಿಯ" ಪರಿಷ್ಕೃತ ಅಂದಾಜನ್ನು ಪರಿಶೀಲಿಸಿ ಮಂಜೂರಾತಿ ನೀಡುವ ವಿಚಾರ.

ತೀರ್ಮಾನ 91:–ಪರಿಷ್ಕೃತ ಅಂದಾಜನ್ನು ಒಪ್ಪಿ ಮಂಜೂರು ಮಾಡಲಾಯಿತು ಮತ್ತು ಸಭೆ ನಡೆಯುವ ಸಂಧರ್ಭದಲ್ಲಿ ಹಾಜರು ಪಡಿಸಿದ ವಾರ್ಡ್. ನಂ.11 ರ ಟಿಪ್ಪುನಗರ ಸೈಯದ್ ಮನೆ, ಇಂತಿಯಾಜ್ ಮತ್ತು ಅಡ್ಡರಸ್ತೆಗಳಲ್ಲಿ ಚಪ್ಪಡಿ ಚರಂಡಿ ನಿರ್ಮಾಣ ಕಾಮಗಾರಿಯ ಪರಿಷ್ಕೃತ ಅಂದಾಜನ್ನು ಒಪ್ಪಿ ಮಂಜೂರು ಮಾಡಲಾಯಿತು.

ವಿಷಯ 92:– ರಾಮನಗರ ನಗರಸಭಾ ವ್ಯಾಪ್ತಿಯಲ್ಲಿ ಒಳಚರಂಡಿ ಸುಗಮ ವ್ಯವಸ್ಥೆಗಾಗಿ ಖರೀದಿಸಿರುವ ಸಕ್ಕಿಂಗ್ ಮಿಷನ್‌ನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರಿಗೆ ಹಸ್ತಾಂತರಿಸಲು ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

ತೀರ್ಮಾನ 92:–ರಾಮನಗರ ನಗರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆಯ ನಿರ್ವಹಣೆಯನ್ನು ಹಾಲಿ ಕರ್ನಾಟಕ ನಗರ ನೀರುಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ನಿರ್ವಹಿಸುತ್ತಿದ್ದಾರೆ. ಈ ನಿರ್ವಹಣೆಯ ಖರ್ಚನ್ನು ನಗರಸಭೆಯಿಂದಾಗಲೀ ಅಥವಾ ಸರ್ಕಾರದಿಂದಾಗಲೀ ಪಾವತಿ ಮಾಡುತ್ತಿಲ್ಲವೆಂದು ಹಾಗು ಇದರ ನಿರ್ವಹಣೆ ಆರ್ಥಿಕ ದೃಷ್ಟಿಯಿಂದ ಕಷ್ಟವಾಗಿರುತ್ತೆಂದು ಇದನ್ನು ನಗರಸಭೆಯೇ ವಹಿಸಿಕೊಳ್ಳುವಂತೆ ನಗರಸಭೆಗೆ ಹಲವಾರು ಪತ್ರಗಳನ್ನು ಬರೆದಿರುತ್ತಾರೆ. ನಗರಸಭೆಯು ಸಹ ಯಾವುದೇ ಹಣವನ್ನು ಕರ್ನಾಟಕ ನಗರ ನೀರುಸರಬರಾಜು ಮತ್ತು ಒಳಚರಂಡಿ ಮಂಡಳಿಯವರಿಗೆ ನೀಡುತ್ತಿಲ್ಲವಾದರಿಂದ ಹಾಲಿ ನಗರಸಭೆಯಿಂದ ಖರೀದಿಸಿರುವ ಸಕ್ಕಿಂಗ್ ಯಂತ್ರವನ್ನು ಮಂಡಳಿಗೆ ವಹಿಸಿದ್ದೇ ಆದಲ್ಲಿ ಹೆಚ್ಚಿನ ಆರ್ಥಿಕ ಹೊರೆ ಬೀಳುವ ಪ್ರಯುಕ್ತ (ಠರಾವು 88 ನ್ನು ಓದುವುದು) ಮುಂದಿನ ಸರ್ಕಾರದ ಆದೇಶದವರೆಗೆ ನಗರಸಭೆ ಸುಪರ್ದಿನಲ್ಲಿ ಇಟ್ಟುಕೊಂಡು ಕರ್ನಾಟಕ ನಗರ ನೀರುಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಬಳಸಬಹುದೆಂದು, ಈ ವಾಹನ ನಿರ್ವಹಣೆಗೆ ತಗಲುವ ಖರ್ಚನ್ನು ಸಾರ್ವಜನಿಕ ಹಿತ ದೃಷ್ಟಿಯಿಂದ ನಗರಸಭೆಯೇ ಭರಿಸುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

ವಿಷಯ 93:–ನಗರಸಭಾ ವ್ಯಾಪ್ತಿಯ ವಿವಿಧ ವಾರ್ಡ್‌ಗಳಲ್ಲಿ ಅತಿ ಅವಶ್ಯವಿರುವ ಕಾಮಗಾರಿಗಳನ್ನು ಮಾಡಿಸಿಕೊಡುವಂತೆ ಸದಸ್ಯರು ಕೋರಿರುವ ಬಗ್ಗೆ ವಿಚಾರ ಪರಿಶೀಲನೆ.

ತೀರ್ಮಾನ 93:– ಕೈಗೊಳ್ಳಬೇಕಾದ ಅಗತ್ಯವಿರುವ ಕಾಮಗಾರಿಗಳ ಮಾಹಿತಿಯನ್ನು ಸಭೆಗೆ ವಿವರಿಸಲಾಯಿತು. ನಂತರ ಸಭೆಯು ಚರ್ಚಿಸಿ ನಗರಸಭಾ ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲದ ಕಾರಣ ಕೆಳಕಂಡ ಕಾಮಗಾರಿಗಳನ್ನು ನಿಯಮಾನುಸಾರ ಮುಕ್ತನಿಧಿಯಿಂದ ಕೈಗೊಳ್ಳಲು ಸಭೆಯು ಒಪ್ಪಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

PDF Created with deskPDF PDF Writer - Trial :: http://www.docudesk.com

| ಕ್ರ. ಸಂ | ಕಾಮಗಾರಿ ವಿವರ | ಅಂದಾಜು ಮೊತ್ತ |
|---|---|---|
| 1 | ವಾರ್ಡ್ ನಂ. 2 ರಲ್ಲಿ ಬರುವ ಹಾಜಿನಗರ ಕಾಲೇಜ್ ಕಾಂಪೌಂಡ್ ಪಕ್ಕ ರಸ್ತೆ ಅಭಿವೃದ್ಧಿಪಡಿಸುವುದು. | 60,000–00 |
| 2 | ವಾರ್ಡ್ ನಂ. 22ರ ರೆಹಮಾನಿಯಾನಗರ ಮಹಮದೀಯ ಮಸೀದಿ ಹತ್ತಿರ ದೊಡ್ಡ ಚರಂಡಿ ಪಕ್ಕದಲ್ಲಿ ಚರಂಡಿ ಕಾಮಗಾರಿ. | 46,000–00 |
| 3 | ವಾರ್ಡ್ ನಂ. 11ರ ಗೌಸಿಯಾನಗರ ಸಲಾಂ ಮನೆಯಿಂದ ಶೀರ್‌ಹಳ್ಳದವರೆಗೆ ಚಪ್ಪಡಿ ಚರಂಡಿ ಕಾಮಗಾರಿ. | 47,000–00 |
| 4 | ವಾರ್ಡ್ ನಂ.17ರ ಬಾಲಗೇರಿ ಲಕ್ಷ್ಮಿ ಮನೆ ಹತ್ತಿರ ಕಾಂಕ್ರೀಟ್ ರಸ್ತೆ ನಿರ್ಮಾಣ | 44,000–00 |
| 5 | ವಾರ್ಡ್ ನಂ 12ರಲ್ಲಿ ಬರುವ ಮಿನಿಟ್ಯಾಂಕ್‌ನಿಂದ ಅಮೀರ್ ನಿವೇಶನದವರೆಗೆ ರಸ್ತೆ ಅಭಿವೃದ್ಧಿಪಡಿಸುವುದು. | 22,000–00 |
| 6 | ವಾರ್ಡ್.27 ರ ಅಶೋಕ್ ಮನೆಯಿಂದ (ಮಾಗಡಿ ರಸ್ತೆ) ಶ್ರೀಧರ್ ಮನೆವರೆಗೆ ಚರಂಡಿ ನಿರ್ಮಾಣ. | 30,000–00 |
| 7 | ವಾರ್ಡ್.ನಂ.27ರ ವಿವೇಕಾನಂದನಗರ ಶಿವಣ್ಣ ಮನೆ ಹತ್ತಿರ ಕಲ್ವರ್ಟ್ ನಿರ್ಮಾಣ | 40.000–00 |
| 8 | ವಾರ್ಡ್ ನಂ. 29ರ ಐಜೂರು ಸರ್ವೇ ನಂ.4 ರ ರಸ್ತೆಯ 1ನೇ ಅಡ್ಡರಸ್ತೆಯಿಂದ ಅಯ್ಯೂಬ್ ಮನೆವರೆಗೆ ಚರಂಡಿ ನಿರ್ಮಾಣ | 75.000–00 |
| 9 | ವಾರ್ಡ್ ನಂ.2 ರ ಉತ್ತರ ಬಡಾವಣೆಯಿಂದ ಗ್ಯಾಸ್ ಗೋಡನ್ ರಸ್ತೆಯ ಬಸವರಾಜು ಮನೆ ಮುಂದೆ ರಸ್ತೆ ಅಭಿವೃದ್ಧಿಪಡಿಸುವುದು. | 2,18,000–00 |
| 10 | ವಾರ್ಡ್ ನಂ. 4&6 ರಲ್ಲಿ ಬರುವ ಗಣೇಶನ ದೇವಸ್ಥಾನದಿಂದ ಅರಳೀಮರದವರೆಗೆ ಡಾಂಬರೀಕರಣ (ಮೀನು ಮಾರಾಟ ಅಂಗಡಿವರೆಗೆ) | 3,64,000–00 |
| 11 | ವಾರ್ಡ್ ನಂ. 10 ರಲ್ಲಿ ಬರುವ ಪೋಸ್ಟ್ ಆಫೀಸ್ ರಸ್ತೆಯಿಂದ ಶೆಟ್ಟಿಹಳ್ಳಿಬೀದಿ ಗೋಡನ್‌ವರೆಗೆ ಡಾಂಬರೀಕರಣ | 1,92,000–00 |
| 12 | ವಾರ್ಡ್ ನಂ.23 ರ ಟಿಪ್ಪುನಗರ ಸೀರಳ್ಳದಿಂದ ಮಸೀದಿವರೆಗೆ, ಮಸೀದಿ ರಸ್ತೆಯಿಂದ ಕೊತ್ತೀಪುರ ಮುಖ್ಯರಸ್ತೆವರೆಗೆ & ಮಸೀದಿಯಿಂದ ರಫೀಕ್ ಮನೆವರೆಗೆ ಡಾಂಬರೀಕರಣ | 3,52,000–00 |
| 13 | ವಾರ್ಡ್ ನಂ.23 ರ ಟಿಪ್ಪುನಗರ ಮಸೀದಿಯಿಂದ ಶಾದೀಮಹಲ್‌ವರೆಗೆ ಚರಂಡಿಯನ್ನು ದುರಸ್ಥಿಪಡಿಸುವುದು. | 59,000–00 |
| 14 | ವಾರ್ಡ್ ನಂ.16 ರ ಬಾಲಗೇರಿ ಅರಳೀಮರದ ಮಿನಿಟ್ಯಾಂಕ್‌ನಿಂದ ನಾಲಬಂದವಾಡಿ ರಸ್ತೆವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ. | 1,51,000–00 |
| 15 | ವಾರ್ಡ್ ನಂ.27 ರ ಪುಟ್ಟಸ್ವಾಮಯ್ಯ ಮನೆಯಿಂದ ಕೆಂಗಲ್ ಹನುಮಂತ್ಯ ರಸ್ತೆವರೆಗೆ ಚರಂಡಿ ನಿರ್ಮಾಣ | 60,000–00 |
| 16 | ವಾರ್ಡ್ ನಂ.27 ರ ಮಾಗಡಿ ರಸ್ತೆಯ ವೆಂಕಟಪ್ಪ ಮನೆವರೆಗೆ ಚರಂಡಿ ನಿರ್ಮಾಣ | 2,11,000–00 |
| 17 | ವಾರ್ಡ್ ನಂ. 27 ರ ಮಾಗಡಿ ರಸ್ತೆಯ ವೆಂಕಟಪ್ಪ ಮನೆವರೆಗೆ ಚರಂಡಿ ನಿರ್ಮಾಣ | 40,000–00 |
| 18 | ವಾರ್ಡ್ ನಂ 17ರ ನೇರಳೆಕೆರೆ ಬೋರಯ್ಯ ಮನೆಯಿಂದ ಮುಮ್ತಾಜ್ ಪಾಷ ಮನೆವರೆಗೆ ಚರಂಡಿ ಕಾಮಗಾರಿ. | 1,01,000–00 |
| 19 | ವಾರ್ಡ್ ನಂ.3 ರ ಹಳೇ ಬಿ.ಎಂ.ರಸ್ತೆಯಿಂದ ನಂಜಪ್ಪ ಬಡಾವಣೆಯ 3ನೇ ಕ್ರಾಸ್ ಡಾಂಬರ್ ಮಾಡುವುದು. | 2,30,000–00 |
| 20 | ಹಾಲಿ ನಿರ್ಮಿಸುತ್ತಿರುವ ಸೀರಳ್ಳದ ಪೈಪ್ ಕನ್ವರ್ಟಿಂಗ್ ಹೆಚ್ಚುವರಿಯಾಗಿ 2 ಸಾಲಿನ 6 ಪೈಪುಗಳನ್ನು ಅಳವಡಿಸುವ ಕಾಮಗಾರಿ | |
| | | |

ವಿಷಯ 94:– ಆರ್.ಕೆ. ಪ್ರಭು ಚೆನ್ನ ಬಸವಚಾರಿ ಇವರು ದಿ: 05.12.2006 ರಂದು ಅರ್ಜಿ ಸಲ್ಲಿಸಿ ಐಜೂರು ಚೋಳಿ ಪುರದ ಸರ್ವೆ.ನಂ.65 ರಲ್ಲಿ ತಮ್ಮ ಬಾಬ್ತು ಇರುವ ಜಮೀನಿನಲ್ಲಿ ಗುಡಿಸಲುಗಳನ್ನು

PDF Created with deskPDF PDF Writer - Trial :: http://www.docudesk.com

ಹಾಕಿಕೊಂಡಿರುವುದರಿಂದ ತಮಗೆ ನಗರಸಭೆಯಿಂದ ಬದಲಿ ನಿವೇಶನ ಕೋರಿ ಕೊಟ್ಟಿರುವ ಅರ್ಜಿಯ ವಿಚಾರ.

ತೀರ್ಮಾನ 94:-ಸಭೆಯು ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿತು. ಸದಸ್ಯರಾದ ಶ್ರೀ ಬಿ. ಉಮೇಶ್ ರವರು ಮಾತನಾಡಿ ಅರ್ಜಿದಾರರು ಹೊಂದಿದ್ದ ನಗರಸಭಾ ಖಾತಾ ನಂ.1622 ರ ಅಳತೆ 100 X 80 ಅಡಿಗಳ (8000 ಚದುರಡಿ) ಜಾಗದಲ್ಲಿ ನಿರ್ಗತಿಕರು ಷೆಡ್ ಹಾಕಿಕೊಂಡು ವಾಸವಿದ್ದು ಇವರನ್ನು ಒಕ್ಕಲೆಬ್ಬಿಸಿದ್ದಲ್ಲಿ ನಗರಸಭೆಯಿಂದಲೇ ಬೇರೆ ವ್ಯವಸ್ಥೆ ಮಾಡಬೇಕಾಗಿರುತ್ತದೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಪರಿಗಣಿಸಿ ನಗಸಭೆಯಿಂದ ಬೇರೆ ನಿವೇಶನ ನೀಡುವಂತೆ ತಿಳಿಸಿ ಅರ್ಜಿದಾರರ ಮನವಿಯನ್ನು ಸೂಕ್ತಕ್ರಮ ಕೈಗೊಳ್ಳಲು ತಿಳಿಸಿರುವುದರಿಂದ ಮೇಲ್ಕಂಡ ನಿವೇಶನಕ್ಕೆ ಪರಿಹಾರವಾಗಿ ಕನಿಷ್ಠ 6000 ಚ.ಅಡಿಯ ನಿವೇಶನವನ್ನಾದರು ಮಂಜೂರು ಮಾಡುವಂತೆ ತಿಳಿಸಿದರು. ನಂತರ ಸಭೆಯು ನಗರಸಭೆಯು ಸ್ವಾಧೀನದಲ್ಲಿರುವ ನಿವೇಶನವನ್ನು ಪತ್ತೇಹಚ್ಚಿ 50 X 40 ಅಡಿ ವಿಸ್ತೀರ್ಣದ 2 ನಿವೇಶನಗಳನ್ನು ಮಂಜೂರು ಮಾಡುವುದೆಂದು ನಿವೇಶನ ಲಭ್ಯವಿಲ್ಲದಿದ್ದಲ್ಲಿ ಮುಂದೆ ನಿವೇಶನ ವಿತರಿಸುವ ಸಂಧರ್ಭದಲ್ಲಿ 50 X 40 ವಿಸ್ತೀರ್ಣದ 2 ನಿವೇಶನಗಳನ್ನು ನೀಡುವುದೆಂದು ಸಭೆಯು ಒಪ್ಪಿ ಸರ್ವಾನುಮತದಿಂದ ತೀರ್ಮಾನಿಸಿತು. ನಗರಸಭೆಯಿಂದ ನಿವೇಶನ ನೊಂದಾಯಿಸಿಕೊಟ್ಟ ನಂತರ ಅರ್ಜಿದಾರರ ನಿವೇಶನವನ್ನು ನಗರಸಭೆ ಹೆಸರಿಗೆ ನೊಂದಾಯಿಸಿ ಕೊಳ್ಳಲು ತೀರ್ಮಾನಿಸಲಾಯಿತು.

ವಿಷಯ 95:- ಶ್ರೀಮತಿ. ಬಿ.ಸಿ. ಪಾರ್ವತಮ್ಮ, ನಗರಸಭಾ ಸದಸ್ಯರು ಅರ್ಜಿ ಸಲ್ಲಿಸಿ ತಮಗೆ ಸೇರಿದ ಖಾತೆ.ನಂ. 1789/2659/65 ರ ಲಗತ್ತು 20 X 30 ಅಡಿಗಳು ನಗರಸಭಾ ಜಾಗವಿರುವುದಾಗಿ ಕಿಮತ್ತು ದರಕ್ಕೆ ಮಂಜೂರು ಮಾಡಿಕೊಡಲು ಕೋರಿರುವ ವಿಚಾರ.

ತೀರ್ಮಾನ 95:-ವಿಷಯದ ಬಗ್ಗೆ ಪೌರಾಯುಕ್ತರು ಸಭೆಗೆ ವಿವರಿಸಿದರು. ಸದಸ್ಯರಾದ ಶ್ರೀ ಶೇಷಾದ್ರಿರವರು ಮಾತನಾಡಿ ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ಮುಂದಿನ ಅಗತ್ಯತೆ ಅನುಸರಿಸಿ ಅಧ್ಯಕ್ಷರು ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳಬಹುದೆಂದು ತಿಳಿಸಿದರು. ಶ್ರೀ ಶೇಷಾದ್ರಿರವರ ಅಭಿಪ್ರಾಯವನ್ನು ಸಭೆಯು ಅನುಮೋದಿಸಿತು.

ವಿಷಯ 96:- ಸರ್ಕಾರದ ನಡವಳಿ ಸಂ:ಗ್ರಾ. ಅ.ಪ/155/ಸಿಆರ್/2006, ದಿ: 03.10.2006 ರಂದು 12 ನೇ ಹಣಕಾಸು ಅನುದಾನದಡಿ ಮಂಜೂರಾಗಿರುವ ರೂ. 25.00 ಲಕ್ಷಗಳಿಗೆ ಕ್ರಿಯಾ ಯೋಜನೆಗೆ ಮಂಜೂರಾತಿ ನೀಡುವ ವಿಚಾರ.

ತೀರ್ಮಾನ 96:-ಕೆಳಕಂಡಂತೆ ತಯಾರಿಸಿರುವ ಕ್ರಿಯಾಯೋಜನೆಗೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು ಮತ್ತು ನಿಯಾಮಾನುಸಾರ ಜರೂರು ಕ್ರಮವಹಿಸಲು ಸೂಚಿಸಲಾಯಿತು.

| ಕ್ರ.ಸಂ | ಕಾಮಗಾರಿ ವಿವರ | **ಅಂದಾಜು ಮೊತ್ತ** |
|---|---|---|
| 1 | ವಾರ್ಡ್ ನಂ.23ರ ಮತ್ತು 12ರ ಕೊತ್ತೀಪುರ ಅರಳಿಮರದಿಂದ ಟಿಪ್ಪುನಗರ ಮಿನಿಟ್ಯಾಂಕ್‌ವರೆಗೆ ಚರಂಡಿ ನಿರ್ಮಿಸುವುದು | 5,73,000-00 |
| 2 | ವಾರ್ಡ್ ನಂ.23ರ ಕೋತ್ತಿಪುರ (ಅರಳಿಮರ) ಬಾಬುಸಾಬ್ ಮನೆಯಿಂದ ಬಾಬು ಅಂಗಡಿವರೆಗೆ ಚರಂಡಿ ಕಾಮಗಾರಿ. | 6,42,000-00 |
| 3 | ವಾರ್ಡ್ ನಂ.8 ರ ಪಂಚಮುಖಿ ಸರ್ಕಲ್‌ನಿಂದ ಹಳೇ ಬಿ.ಎಂ ರಸ್ತೆವರೆಗೆ (ಕುದೂಸ್ ಶಾಪ್) ರಸ್ತೆ ಅಭಿವೃದ್ಧಿಪಡಿಸುವುದು | 3,05,000-00 |
| 4 | ವಾರ್ಡ್ ನಂ.30 ರ ಹೌಸಿಂಗ್ ಬೋರ್ಡ್ ಕಾಲೋನಿಯ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳನ್ನು ಅಭಿವೃದ್ಧಿಪಡಿಸುವುದು | 3,01,000-00 |

PDF Created with deskPDF PDF Writer - Trial :: http://www.docudesk.com

| | | |
|---|---|---|
| 5 | ವಾರ್ಡ್ ನಂ.29 ರ ಜಾಲಮಂಗಲ ರಸ್ತೆಯ ಪಾರ್ಥರವರ ಅಂಗಡಿ ಹತ್ತಿರ ಚರಂಡಿ ನಿರ್ಮಾಣ ಮಾಡುವುದು | 1,44,000–00 |
| 6 | ವಾರ್ಡ್ ನಂ.15 ಮತ್ತು 16 ರಲ್ಲಿ ಬರುವ ಮೋತಿನಗರ ಉರ್ದು ಸ್ಕೂಲ್ ಹಿಂಭಾಗದ ರಸ್ತೆಗಳಿಗೆ ಮತ್ತು ಮಸೀದಿ ಮುಂಭಾಗದ ರಸ್ತೆಗಳನ್ನು ಅಭಿವೃದ್ಧಿಪಡಿಸುವುದು | 4,22,000–00 |
| 7 | ವಾರ್ಡ್ ನಂ. 22 ರ ರೆಹಮಾನಿಯನಗರದಲ್ಲಿ ದೇವಮ್ಮ ಮನೆಯಿಂದ ಪ್ಯಾರೇಜಾನ್ ಮನೆವರೆಗೆ ಚರಂಡಿ ನಿರ್ಮಾಣ. | 1,13,000–00 |
| | **ಒಟ್ಟು** | **25,000,00–00** |

ವಿಷಯ 97 :– ಸರ್ಕಾರದ ನಡವಳಿ ಸಂ: ನಇ/91/ಎಸ್.ಎಫ್.ಸಿ/2005, ದಿ: 03.11.2006 ರ ಮೂಲಕ 12 ನೇ ಹಣಕಾಸು ಆಯೋಗದ 3 ನೇ ಕಂತಿನ ಅನುದಾನ ರೂ. 62.58 ಲಕ್ಷ ಬಿಡುಗಡೆ ಆಗಿದ್ದು, ಸರ್ಕಾರವು ಕೆಳಕಂಡ ಬಾಬುಗಳಿಗೆ ಸದರಿ ಮೊಬಲಗನ್ನು ಉಪಯೋಗಿಸಲು ಮಾರ್ಗಸೂಚಿ ನೀಡಿದ್ದು, ಮಾರ್ಗಸೂಚಿಯಂತೆ ತಯಾರಿಸಿರುವ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ವಿಚಾರ.

1. ಘನತ್ಯಾಜ್ಯ ವಸ್ತು ಶೇಖರಣಾ ಪ್ರದೇಶ ಅಭಿವೃದ್ಧಿ ಪಡಿಸುವುದು. – ರೂ. 32.00 ಲಕ್ಷ
2. ಸಾಧನ ಸಲರಕೆಣಗಾಗಿ – ರೂ. 7.00 ಲಕ್ಷ
3. ಅಭಿವೃದ್ಧಿ ಕಾಮಗಾರಿಗಾಗಿ – ರೂ. 6.08 ಲಕ್ಷ
4. ಎನರ್ಜಿ ಸೇವಿಂಗ್ಸ್‌ಗಾಗಿ – ರೂ. 15.00 ಲಕ್ಷ
5. ಡಾಟ ಬೇಸ್ ಉನ್ನತಿಕರಣಕ್ಕಾಗಿ – ರೂ. 2.50 ಲಕ

– ರೂ. 62.58 ಲಕ್ಷ

ತೀರ್ಮಾನ 97:–ವಿಷಯದ ಬಗ್ಗೆ ಪೌರಾಯುಕ್ತರು ಸಭೆಗೆ ವಿವರಿಸಿದರು. ನಂತರ ಸಭೆಯು ಕೆಳಕಂಡಂತೆ ಸರ್ವಾನುಮತದ ತೀರ್ಮಾನ ತೆಗೆದುಕೊಂಡಿತು.

1. ಘನತ್ಯಾಜ್ಯ ವಸ್ತು ಶೇಖರಣಾ ಪ್ರದೇಶ ಅಭಿವೃದ್ಧಿ ಪಡಿಸುವುದು. – ರೂ. 32.00 ಲಕ್ಷ

ಘನತ್ಯಾಜ್ಯ ವಸ್ತು ಶೇಕರಣಾ ಪ್ರದೇಶದ ಸುತ್ತು ಗೋಡೆ ನೀರಿನ ವ್ಯವಸ್ಥೆ ಸಂಪರ್ಕ ರಸ್ತೆ ನಿರ್ಮಾಣ ಇತ್ಯಾದಿಗೆ ಅಭಿವೃದ್ದಿಗೆ ಈಗಾಗಲೇ ಟೆಂಡರ್ ಪ್ರೀಮಿಯಂ ಸೇರಿ ರೂ. 68.53 ಲಕ್ಷಗಳಿಗೆ ಟೆಂಡರ್ ಅನುಮೋದನೆ ದೊರತಿದ್ದು ಈ ಅಭಿವೃದ್ದಿ ಕಾಮಗಾರಿಗೆ ಉಪಯೋಗಿಸಿಕೊಳ್ಳುವುದೆಂದು ಬಾಕಿ ಮೊಬಲಗನ್ನು ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದೆಂದು ತೀರ್ಮಾನಿಸಲಾಯಿತು.

2. ಸಾಧನ ಸಲರಕೆಣಗಾಗಿ – ರೂ. 7.00 ಲಕ್ಷ

ಸಾಧನ ಸಲಕರಣೆಗಾಗಿ ಈಗಾಗಲೇ ರೂ. 23.59 ಲಕ್ಷಗಳಿಗೆ ಕ್ರಿಯಾಯೋಜನೆಗೆ ಮಂಜೂರಾತಿ ಪಡೆಯಲಾಗಿದ್ದು ಈ ಬಾಬ್ತು ಸರ್ಕಾರದಿಂದ ರೂ. 22.98 ಲಕ್ಷಗಳು ಮಾತ್ರ ಬಿಡುಗಡೆಯಾಗಿರುತ್ತದೆ. ಪ್ರಸ್ತುತ ರೂ. 30.36 ಲಕ್ಷಗಳಿಗೆ ಪರಿಷ್ಕೃತ ಕ್ರಿಯಾಯೋಜನೆ ತಯಾರಿಸಿ ಕೆಳಕಂಡ ಯೋಜನೆಯನ್ನು ಅಳವಡಿಸಿ ಪೌರಾಡಳಿತ ನಿರ್ದೇಶನಾಲಯಕ್ಕೆ ಸಲ್ಲಿಸಿದ್ದು, ಈ ಬಾಬ್ತು ಮೇಲ್ಕಂಡಂತೆ ಬಿಡುಗಡೆಯಾಗಿರುವ ಅನುದಾನ ಪರಿಷ್ಕೃತ ಕ್ರಿಯಾಯೋಜನೆ ನಿರ್ವಹಣೆಗೆ ಅಗತ್ಯವಿದ್ದುದರಿಂದ ಮೇಲ್ಕಂಡಂತೆ ಬಿಡುಗಡೆಯಾಗಿರುವ ಮೊಬಲಗನ್ನು ಹಾಲಿ

PDF Created with deskPDF PDF Writer - Trial :: http://www.docudesk.com

ಪರಿಷ್ಕೃತ ಕ್ರಿಯಾಯೋಜನೆ ಕೆಲಸಗಳಿಗೆ ಉಪಯೋಗಿಸಿಕೊಳ್ಳುವುದೆಂದು ತೀರ್ಮಾನಿಸಲಾಯಿತು. ಜರೂರಾಗಿ ಅನುಮೋದನೆ ಪಡೆದು ನಿಯಾಮಾನುಸಾರ ಕ್ರಮವಹಿಸಲು ಸೂಚಿಸಲಾಯಿತು.

| ಕ್ರ.ಸಂ | ಪರಿಷ್ಕೃತ ಕ್ರಿಯಾಯೋಜನೆಗೆ ಅಳವಡಿಸಿರುವ ಯೋಜನೆಗಳು | | | ಅಂದಾಜು |
|---|---|---|---|---|
| 1 | 3.00 cum 7 ಕಂಟೈನರ್ | | | 3,46,500–00 |
| ಪ್ರಥಮ ಹಂತವಾಗಿ ಮಂಜೂರಾದ ಕ್ರಿಯಾಯೋಜನೆ ರೂ. 23.59 ರ ಅಂದಾಜು ದರಕ್ಕಿಂತ ಹೆಚ್ಚಿಗೆ ಪಾವತಿಯಾಗಿರುವ ಬಿಲ್ಲುಗಳು | | | | |
| | | ಮಂಜೂರಾದ ಅಂದಾಜು | ಖರ್ಚಾಗಿರುವ/ಖರ್ಚಾಗುವ ಮೊಬಲಗು | ಹೆಚ್ಚುವರಿ |
| 1 | ಕಂಟೈನರ್ | 8,25,000 | 8,63,500 | 38,500 |
| 2 | ಟ್ರಕ್ ರಿಪೇರ್ | 75,000 | 1,35,000 | 60,000 |
| 3 | ಡಂಪರ್‌ಪ್ಲೇಸರ್ ರಿಪೇರ್ | 75,000‘ | 1,37,321 | 62,321 |
| 4 | ಹೊಸಡಂಪರ್ ಪ್ಲೇಸರ್ (ಖರೀದಿ) | 8,50,000 | 9,95,000 | 1,45,000 |
| ಒಟ್ಟು | | | | 6,52,321 |

3. ಅಭಿವೃದ್ಧಿ ಕಾಮಗಾರಿಗಾಗಿ – ರೂ. 6.08 ಲಕ್ಷ

ಕೆಳಕಂಡಂತೆ ತಯಾರಿಸಿರುವ ಕ್ರಿಯಾಯೋಜನೆಗೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. ಜರೂರು ಅನುಮೋದನೆ ಪಡೆದು ನಿಯಾಮಾನುಸಾರ ಕಾಮಗಾರಿ ಕೆಲಸ ನಿರ್ವಹಿಸುವಂತೆ ಸೂಚಿಸಲಾಯಿತು.

| ಕ್ರ.ಸಂ | ಕಾಮಗಾರಿ ವಿವರ | **ಅಂದಾಜು ಮೊತ್ತ** |
|---|---|---|
| 1 | ವಾರ್ಡ್ ನಂ. 16 ಮತ್ತು 17 ರ ಬಾಲಗೇರಿ ಅರಳಿಮರದಿಂದ ರೈಲ್ವೇಗೇಟ್ ವರೆಗೆ ರಸ್ತೆ ಅಭಿವೃದ್ದಿಪಡಿಸುವುದು. | 96,000–00 |
| 2 | ವಾರ್ಡ್ ನಂ.22 ರ ರೆಹಮಾನಿಯನಗರದ ಉರ್ದುಸ್ಕೂಲ್ ರಸ್ತೆ, ಮಸೀದಿ ರಸ್ತೆ, ಮೇರಿಯಂ ಸ್ಕೂಲ್ ರಸ್ತೆ ಅಭಿವೃದ್ದಿಪಡಿಸುವುದು | 3,08,000–00 |
| 3 | ವಾರ್ಡ್ ನಂ.23 ರ ಟಿಪ್ಪುನಗರ ಕೆಂಪಮ್ಮನ ಮನೆಯಿಂದ ಟಿಪ್ಪುನಗರ ಶಾದಿಮಹಲ್‌ವರೆಗೆ ಚರಂಡಿ ಕಾಮಗಾರಿ. | 2,04,000–00 |
| | ಒಟ್ಟು | 6,08,000–00 |

4. ಎನರ್ಜಿ ಸೇವಿಂಗ್ಸ್‌ಗಾಗಿ – ರೂ. 15.00 ಲಕ್ಷ

ಈ ಸಂಬಂಧ ಕೆಳಕಂಡಂತೆ ತಯಾರಿಸಿರುವ ಕ್ರಿಯಾಯೋಜನೆಯನ್ನು ಒಪ್ಪಿ ತೀರ್ಮಾನಿಸಿತು. ಹಾಗು ಜರೂರಾಗಿ ಕ್ರಿಯಾಯೋಜನೆಗೆ ಅನುಮತಿ ಪಡೆದು ನಿಯಾಮಾನುಸಾರ ಕೆಲಸ ಮಾಡಿಸಲು ಸೂಚಿಸಲಾಯಿತು.

PDF Created with deskPDF PDF Writer - Trial :: http://www.docudesk.com

## ACTION PLAN FOR ENERGY CONSERVATION PROJECT IN RAMANAGARA C.M.C. LIMITS

| Sl No | Name of work | Qty | Units | Unit rates | Total Cost | Total Amt. |
|---|---|---|---|---|---|---|
| 1 | Providing Energy Management system to street lights with Auto Programmable unit, for switching ON, OFF & Dimming option, Voltage & power conditioning with protection units, monitoring & data acquisition & Remote controlling of all these operations. | | | | | |
| o | **High Mast** | | | | | |
| 1 | Mehaoob nagara | 6.00 | KVA | 14,500 | 87,000 | |
| 2 | Rehamaniya nagara | 6.00 | KVA | 14,500 | 87,000 | |
| 3 | K.S.R.T.C. bus stand | 6.00 | KVA | 14,500 | 87,000 | |
| 4 | Kai soppina beedi | 6.00 | KVA | 14,500 | 87,000 | |
| | **TOTAL** | 24.00 | KVA | | | **4,35,000** |
| | | | | | | |
| **B** | **Public & Street light fittings** | | | | | |
| 1 | Kai soppina beedi | 12.00 | KVA | 14,500 | 1,74,000 | |
| 2 | Choultry street | 5.00 | KVA | 14,500 | 72,500 | |
| 3 | Nalabandvadi road | 5.00 | KVA | 14,500 | 72,500 | |
| 4 | Muslim colony | 5.00 | KVA | 14,500 | 72,500 | |
| 5 | Ijoor 1 | 5.00 | KVA | 14,500 | 72,500 | |
| 6 | Ijoor 2 | 5.00 | KVA | 14,500 | 72,500 | |
| 7 | Balageri | 5.00 | KVA | 14,500 | 72,500 | |
| 8 | Prakash Filature | 7.00 | KVA | 14,500 | 1,01,500 | |
| 9 | Mehaboob nagara | 17.00 | KVA | 14,500 | 2,46,500 | |
| 10 | Arakeswara colony | 7.00 | KVA | 14,500 | 1,01,500 | |
| | | 73.00 | KVA | | | **10,58,000** |
| 2 | Processing & Operational Cost | | | | | **7,500** |
| | **TOTAL PROJECT COST** | | | | | **15,00,000** |
| | ***In words Rupees Fifteen lakhs only*** | | | | | |

5. ಡಾಟ ಬೇಸ್ ಉನ್ನತಿಕರಣಕ್ಕಾಗಿ – ರೂ. 2.50 ಲಕ್ಷ

ಡಾಟ ಬೇಸ್ ಉನ್ನತಿಕರಣಕ್ಕಾಗಿ ಕಛೇರಿಗೆ ಅಗತ್ಯವಾದ ಗಣಕಯಂತ್ರ ಪ್ರಿಂಟರ್, ಯುಪಿಎಸ್ ಇತರೇ ಸಾಮಾಗ್ರಿಗಳನ್ನು ಖರೀದಿಸುವುದೆಂದು ಹಾಗೂ ಸಾಕಷ್ಟು ಅನುದಾನವಿರುವುದರಿಂದ ಜಿ.ಐ.ಎಸ್ ಅಡಿ ನಿರ್ವಹಣೆಯಾಗುತ್ತಿರುವ ಡಾಟ ಎಂಟ್ರಿ ಮತ್ತು ಜನನ ಮತ್ತು ಮರಣ

PDF Created with deskPDF PDF Writer - Trial :: http://www.docudesk.com

ದಾಖಲೀಕರಣ ಡಾಟ ಎಂಟ್ರಿಗೆ ನಿರ್ವಹಣೆಗೆ ಖರ್ಚು ನಿರ್ವಹಿಸುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಷಯ 98:-ನಗರಸಭಾ ವ್ಯಾಪ್ತಿಯಲ್ಲಿ ಜಿ.ಐ.ಎಸ್.ಸರ್ವೆ ಕಾರ್ಯವು ಪೂರ್ಣಗೊಳ್ಳದ ಕಾರಣ ನೋಡಲ್ ಇಂಜಿನೀಯರ್‌ರವರ ಸೇವೆ ಅಗತ್ಯವಿದ್ದ ಕಾರಣ ಜನವರಿ-06 ರಿಂದ ಮುಂದುವರೆಸಿರುವುದನ್ನು ಅನುಸಮರ್ಥನಗೊಳಿಸುವ ವಿಚಾರ ಮತ್ತು ಈ ಅವಧಿಗೆ ಗೌರವ ಧನ ಪಾವತಿಸಲು ಅನುಮೋದಿಸುವ ವಿಚಾರ.

ತೀರ್ಮಾನ 98:-ವಿಷಯದ ಬಗ್ಗೆ ಸಭೆಯು ಚರ್ಚಿಸಿ ಜಿಐಎಸ್ ಕಾರ್ಯಕ್ಕೆ ಇವರ ಸೇವೆಯನ್ನು ಬಳಸಿಕೊಂಡಿರುವುದನ್ನು ಅನುಸಮರ್ಥನಗೊಳಿಸಿ 6 ತಿಂಗಳ ಅವಧಿಗೆ (ಜೂನ್-2006ರ ಅಂತ್ಯಕ್ಕೆ) ಮಾಸಿಕ ರೂ. 6000/- ಗೌರವಧನವನ್ನು ನಗರಸಭಾ ನಿಧಿಯಿಂದ ನೀಡುವುದೆಂದು ಸಭೆಯು ಒಪ್ಪಿ ಸರ್ವಾನುಮತದಿಂದ ತೀರ್ಮಾನಿಸಿತು.

ವಿಷಯ 99:-ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರು ದಿ: 28/11/2006 ರಂದು ಪತ್ರ ಬರೆದು ದಿ:06,07/12/2006 ರಂದು ನಡೆಯುವ ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೆ ರೂ. 1.50 ಲಕ್ಷ ಅನುದಾನ ನೀಡಲು ಕೋರಿರುವ ಬಗ್ಗೆ ಪರಿಶೀಲಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

ತೀರ್ಮಾನ 99:-ವಿಷಯವನ್ನು ಚರ್ಚಿಸಲಾಯಿತು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ಮಾನ್ಯ ಮುಂಖ್ಯಮಂತ್ರಿಗಳವರ ಉದ್ಘಾಟನೆಯೊಂದಿಗೆ ಅದ್ದೂರಿಯಿಂದ ನಿರ್ವಹಿಸಿದ್ದನ್ನು ಅಭಿನಂದಿಸಲಾಯಿತು. ಈ ಕಾರ್ಯ ಕ್ರಮಕ್ಕೆ ಸಾಕಷ್ಟು ಹಣ ಖರ್ಚು ಮಾಡಿದ್ದು ನಗರಸಭೆಯಿಂದ ರೂ. 1.50 ಲಕ್ಷಗಳನ್ನು ವಂತಿಗೆಯಾಗಿ ನೀಡಲು ಕೋರಿರುವುದನ್ನು ಪರಿಶೀಲಿಸಲಾಯಿತು. ನಗರಸಭೆ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಈ ಬಾಬ್ತಿಗಾಗಿ 2006-07ನೇ ಸಾಲಿನಲ್ಲಿ ಖರ್ಚಿನ 'ಜಿ' ವಂತಿಗೆಗಳು ಮತ್ತು ಸಹಾಯಗಳು ಶೀರ್ಷಿಕೆಯಡಿ ರೂ. 2.00 ಲಕ್ಷಗಳನ್ನು ಕಾಯ್ದಿರಿಸಿದ್ದು ಈಗಾಗಲೇ 1.00 ಲಕ್ಷಗಳನ್ನು ಊರಿನ ಹಬ್ಬವಾದ ಚಾಮುಂಡೇಶ್ವರಿ ಕರಗದ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡಿದ್ದು ಉಳಿಕೆ ರೂ. 1.00 ಲಕ್ಷವನ್ನು ಮೇಲ್ಕಂಡ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡಬಹುದೆಂದು ಮಾನ್ಯ ಜಿಲ್ಲಾಧಿಕಾರಿಗಳನ್ನು ಕರ್ನಾಟಕ ಪುರಸಭೆಗಳ (ಪವರ್ ಆಫ್ ಎಕ್ಸ್‌ಫೆಂಡಿಚರ್) (ತಿದ್ದುಪಡಿ) ನಿಯಮಗಳು 2003 ರಡಿ ಅನುಮತಿ ದೊರಕಿಸಿಕೊಡಲು ಕೋರಿಕೊಳ್ಳುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

ವಿಷಯ 100 :-ಅಧ್ಯಕ್ಷರ ಅನುಮತಿ ಮೇರೆಗೆ ತರಬಹುದಾದ ಇತರೆ ಜರೂರು ವಿಷಯಗಳು.

ವಿಷಯ 100(1) :-ಸಾರ್ವಜನಿಕ ಹಿತದೃಷ್ಟಿ ಮೇರೆಗೆ ವಾರ್ಡ್ ನಂ.11 ರ ರೈಲ್ವೆ ಸ್ಟೇಷನ್ ಸೇತುವೆಯಿಂದ ಸೀರಳ್ಳದವರೆಗೆ ಮಣ್ಣಿನ ಚರಂಡಿ ನಿರ್ಮಾಣ ಕಾಮಗಾರಿ ಅಂದಾಜು - 29,000-00 ಮಾಡಿಸಿರುವುದನ್ನು ಅನುಸಮರ್ಥನಗೊಳಿಸುವ ವಿಚಾರ.

ತೀರ್ಮಾನ 100(1) :- ಸಭೆಯು ಒಪ್ಪಿ ಅನುಸಮರ್ಥನಗೊಳಿಸಿತು.

ವಿಷಯ:- 100(2) :- 2006-07ನೇ ಸಾಲಿನ ಶೇ. 18 ರ ಯೋಜನೆಯಡಿ ಬ್ಯೂಟಿಪಾರ್ಲರ್ ತರಬೇತಿಗೆ ನಿಯೋಜಿಸಲಾಗಿದ್ದ 10 ಫಲಾನುಭವಿಗಳ ಪೈಕಿ 3 ಅಭ್ಯರ್ಥಿಗಳು ತರಬೇತಿಗೆ ಗೈರು ಹಾಜರಾದ ಪ್ರಯುಕ್ತ ಬೇರೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ವಿಚಾರ.

PDF Created with deskPDF PDF Writer - Trial :: http://www.docudesk.com

ತೀರ್ಮಾನ:- 100(2) ವಿಷಯದ ಬಗ್ಗೆ ಪರಿಶೀಲಿಸಲಾಯಿತು ಈ ಕೆಳಕಂಡ ಫಲಾನುಭವಿಗಳನ್ನು ಆಯ್ಕೆ ಮಾಡಿ ತರಬೇತಿಗೆ ನಿಯೋಜಿಸುವುದೆಂದು ತೀರ್ಮಾನಿಸಲಾಯಿತು.

1. ಮಂಗಳಗೌರಮ್ಮ ಕೋಂ ವೆಂಕಟೇಶ್, ಐಜೂರು ಗುಡ್ಡೆ, ಗೀತಾ ಮಂದಿರ ಬಡಾವಣೆ, ರಾಮನಗರ.
2. ವಿಜಯಕುಮಾರಿ ಕೋಂ ಚಂದ್ರಯ್ಯ, ನೆಹರು ಸ್ಲಂಮ್ ಬೆಟ್ಟದ ತಪ್ಪಲು, ಐಜೂರು, ರಾಮನಗರ.
3. ದೀಪಿಕಾ.ಸಿ ಬಿನ್ ಚಿಕ್ಕವೆಂಕಟಯ್ಯ, ಐಜೂರು, ಇಂದಿರಾನಗರ, ಜಾಲಮಂಗಲ ರಸ್ತೆ, ರಾಮನಗರ.

ವಿಷಯ:- 100(3):- ಎಸ್.ವಿ. ಲ್ಯಾಂಪ್ಸ್ ಖರೀದಿಸುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

ತೀರ್ಮಾನ:-100(3):-ಸಾರ್ವಜನಿಕ ಹಿತದೃಷ್ಠಿಯಿಂದ ಹಾಗೂ ಮಾನ್ಯ ಸದಸ್ಯರ ಒತ್ತಾಯದ ಮೇರೆಗೆ ಮುಕ್ತನಿಧಿಯಿಂದ 90 ಎಸ್.ವಿ ಲ್ಯಾಂಪ್‌ಗಳನ್ನು ಖರೀದಿಸಲು ತೀರ್ಮಾನಿಸಲಾಯಿತು.

ಸಹಿ/-
ಅಧ್ಯಕ್ಷರು
ನಗರಸಭೆ, ರಾಮನಗರ.

" ನಕಲು "

ಪೌರಾಯುಕ್ತರು
ನಗರಸಭೆ, ರಾಮನಗರ

PDF Created with deskPDF PDF Writer - Trial :: http://www.docudesk.com

PDF Created with deskPDF PDF Writer - Trial :: http://www.docudesk.com